SRI H. D. DEVE GOWDA.— You have carefully worded it.

SRI H. M. CHANNABASAPPA.— We only manage it. At the reqest of the Speaker and the House Committee, we have taken this decision, And, I may submit to this House that Government is taking very brisk action to see that better comforts are provided and better convenienees are created for the hon. Members. Government will see that the concerned staff will discharge their duties and responsibilities more efficiently and provide better comforts.

SRI S BANGARAPPA.— What about the officers I referred to? I request the Hon. Minister to make a statement.

SRI H. M. CHANNABASAPPA.—Government has taken over not only the buildings but also the staff and we will see that all members of the staff are appointed and they continue to draw their salaries but in what manner and how, it is left to Government. None of the staff who are in the the employ is going to be disturbed in the sense that they will have no appointment. They will have appointment; we will give them pay, but it may be in the same place they are working or elsewhare.

THE MYSORE (BOMBAY AND HYDERABAD AREAS) RELIGIOUS AND CHARITABLE INAMS ABOLITION BILL, 1972, AS REPORTED BY JOINT SELECT COMMITTEE, MOTION TO CONSIDER

MADAM SPEAKER. SRI B.G.—Bankar will speak.

† ಶ್ರೀ ಬಿ. ಜಿ. ಬಣಕಾರ್. (ಹಿರೇಕೆರೂರು).— ಸನ್ ಮಾನ್ಯ ಅಧ್ಯಕ್ಷಿಣಿಯವರೇ, ಕಂದಾಯ ಮಂತ್ರಿಗಳು ಈ ಸದನದ ಅಂಗೀಕಾರಕ್ಕೆ ಮಂಡಿಸಿರುವಂಥ ಮುಂಬಯಿ ಮತ್ತು ಹೈದರಾಬಾದು ಕರ್ನಾಟಕದ ೭ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಮೈಸೂರು ರಿಲಿಜಿಯಸ್ ಅಂಡ್ ಚಾರಿಟಬಲ್ ಇನಾಂ ಬಿಲ್ಲನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ನಮ್ಮ ರಾಜ್ಯದಲ್ಲಿ ಇಂಥ ಒಂದು ಬಿಲ್ಲು ಪಾಸು ಮಾಡುವುದು ಎಂದರೆ ಇದು ಕ್ರಾಂತಿ ಕಾರಕವಾದಂಥ ಪ್ರಗತಿದಾಯಕವಾದಂಥ ಹಾಗೂ ಐತಿಹಾಸಿಕವಾದಂಥ ಕಾನೂನು ಆಗಲಿದೆ ಎನ್ನುವುದನ್ನು ನಾವು ಮರೆಯತಕ್ಕದ್ದು ಅಲ್ಲ. ಈ ೭ ಜಿಲ್ಲೆಗಳ ಪೈಕಿ ಸುಮಾರು ೧೮೨೨ ಹಳ್ಳಿಗಳು ಈ ಕಾನೂನಿಗೆ ಒಳಪಡುತ್ತವೆ. ೧೮೨೨ ಹಳ್ಳಿಗಳಲ್ಲಿ ೪೪,೨೫೭ ಎಕರೆ ಜಮೀನು ಈ ಬಿಲ್ಲಿಗೆ ಒಳಪಡುತ್ತವೆ. ೭ ಜಿಲ್ಲೆಗಳಲ್ಲಿ ಸುಮಾರು ೭೮೧೭ ವೈನರ್ ಇನಾಂಗಳು ಇರುತ್ತವೆ. ವೈನರ್ ಇನಾಂಗಳಿಗೆ ಸಂಬಂಧಪಟ್ಟ ಜಮೀನಿನ ಪ್ರದೇಶ ೧೬೩,೮೬೫ ಎಕರೆ ಚಿಲ್ಲರೆ ಇದೆ ೭ ಜಿಲ್ಲೆಗಳಲ್ಲಿ ರಿಲಿಜಿಯಸ್ ಮತ್ತು ಚಾರಿಟಬಲ್ ಇನ್ಸ್ಟಿಟ್ಯೂಷನ್ಸ್ ೧೫,೦೩೨ ಇವೆ. ೧೫,೦೩೨ ಇನ್ಸ್ಟಿಟ್ಯೂಷನ್ಸ್‌ಗಳಿಗೆ ಸಂಬಂಧಪಟ್ಟ ಜಮೀನು ೧ ಲಕ್ಷ ೩೦ ಸಾವಿರ ೨೧ ಎಕರೆ ಇದೆ ಈ ೭ ಜಿಲ್ಲೆಗಳಲ್ಲಿ ಇನಾಂತಿಗಳಿಗೆ ಒಳಪಟ್ಟಂಥ ಮೂರು ತರಹ ಜನರು ಇದ್ದಾರೆ ಅಂದರೆ ಪರ್ಮನೆಂಟ್ ಟೆನೆಂಟ್ಸ್ ೩೯೨೦. ಪ್ರೊಟೆಕ್ಟೆಡ್ ಟೆನೆಂಟ್ಸ್ ೨೭೭೭ ಜನರು ಇದ್ದಾರೆ. ಪ್ರೊಟೆಕ್ಟೆಡ್ ಟೆನೆಂಟ್ಸ್ ಮತ್ತು ಪರ್ಮನೆಂಟ್ ಟೆನೆಂಟ್ಸ್ ಅಲ್ಲದೆ ಇತರರು ೩೦೯೦ ಜನರು ಇದ್ದಾರೆ. ೧೦,೭೪೩ ಜನ ರೈತರು ಇದಕ್ಕೆ ಒಳಪಟ್ಟಿದ್ದಾರೆ. ರೈತ ಒಬ್ಬನೇ ಅಲ್ಲದೆ ಪೂಜಾರಿಗಳು, ಅರ್ಚಕರು, ಮುಲ್ಲಗಳು, ಮುತವಲ್ಲಿಗಳು, ಮುತ್ಸದ್ದಿಗಳು, ಖಾಜಿಗಳು ಹಾಗೂ ಟ್ರಸ್ಟೀಸ್ ಇವರುಗಳು ಸ್ವತಃ ಸಾಗುವಳಿ ಮಾಡತಕ್ಕಂಥ ಜಮೀನು ಸುಮಾರು ೮೪,೬೬೮ ಎಕರೆ. ಇಷ್ಟು ಹೇಳಿ ಈ ಮಸೂದೆ ಪಾಸ್ ಆಗುವುದರಿಂದ ಇವರುಗಳಿಗೆ ಯಾವುದೇ ರೀತಿಯಿಂದ ಅನ್ಯಾಯ ಆಗುತ್ತಾ ಇಲ್ಲ ಎನ್ನುವುದನ್ನು ಮರೆಯಬಾರದು.

(ಶ್ರೀ ಬಿ. ಜಿ. ಬಣಕಾರ್)

ಏಕೆಂದರೆ ಇವರಿಗೆ ಕೊಟ್ಟಿರುವ ಇನಾಂಗಳು ಸುಮಾರು ಆರನೂರು ವರ್ಷಗಳ ಹಿಂದಿನಿಂದಲೂ ಬಂದವು. ನಮ್ಮ ದೇಶದಲ್ಲಿ ಆಳಿದ ರಾಜಮಹಾರಾಜರುಗಳು ಯುದ್ಧಕ್ಕೆ ಹೋದಾಗ ಅದರಿಂದ ದಿಗ್ವಿಜಯವನ್ನು ಪಡೆದಾಗ ದೇವಾಲಯಗಳನ್ನು ಕಟ್ಟಿಸಿ ಅಲ್ಲಿನ ದೇವರುಗಳನ್ನು ಪೂಜಿಸಲು ಒಂದು ರೀತಿ ಅವಕಾಶ ಮಾಡಿಕೊಂಡಿದ್ದರು. ಇದೇ ರೀತಿ ಹಿಂದೆ ಚಿತ್ರದುರ್ಗದಲ್ಲಿದ್ದ ಕೆಳದಿಯ ನಾಯಕರು ಹಾಗು ಇನ್ನಿತರ ಅರಸರು ಮತ್ತು ಈಚೆಗೆ ಮೈಸೂರಿನ ಒಡೆಯರ್‌ರವರು ಇಂತಹ ಧಾರ್ಮಿಕ ಸಂಸ್ಥೆಗಳನ್ನು ಗುಡಿಗಳನ್ನು ಕಟ್ಟಿಸಿ ಅಲ್ಲಿಗೆ ಬೇಕಾಗುವ ಭೂಮಿಗಳನ್ನು ಬಿಟ್ಟು ಅದರಿಂದ ಬರುವ ವರಮಾನ ಪಡೆದು ಅಲ್ಲಿನ ಪೂಜಾರಿಗಳು ಪೂಜೆ ಇತ್ಯಾದಿಗಳನ್ನು ಮಾಡಿಕೊಂಡು ಜೀವನ ನಡೆಸಿಕೊಂಡು ಬರುತ್ತಿದ್ದಾರೆ. ಈಗ ಇಂತಹ ಸವಲತ್ತುಗಳು ಮಾಯವಾಗಿ ಗುಡಿಗಳ ಮೇಲ್ವಿಚಾರಣೆಗೆ ತಕ್ಕ ಸವಲತ್ತುಗಳನ್ನು ಸರಕಾರದವರೇ ಕೊಡುತ್ತಾರೆಂದು ಇದರಲ್ಲಿದೆ. ಧರ್ಮ ಸಂಸ್ಥಾಪನೆ ಮಾಡಬೇಕೆಂದು ಮಠಗಳನ್ನು ಕಟ್ಟಿಸಿಕೊಟ್ಟಿದ್ದರು ಮತ್ತು ಇವುಗಳ ಮೂಲಕ ಸಮಾಜದ ಕಾರ್ಯ ಕಲಾಪಗಳನ್ನು ಮಾಡಲು, ದೇವರ ಪೂಜೆಗಳನ್ನು ಮಾಡಲು ದೇಶದಲ್ಲಿ ಧರ್ಮ ನೆಲಸಲು ಬೇಕಾದಷ್ಟು ದತ್ತಿಗಳನ್ನು ಬಿಟ್ಟಿದ್ದರು. ಇಂತಹ ಕಾರ್ಯ ಸಾವಿರಾರು ವರ್ಷಗಳಿಂದಲೂ ನಡೆದುಕೊಂಡುಬರುತ್ತಿದೆ. ಹಿಂದೆ ಬ್ರಿಟಿಷರು ಈ ರೀತಿಯಾಗಿ ಬಂದಿದ್ದ ದತ್ತಿ ಜಮೀನುಗಳಿಗೆ ರಿಕಾರ್ಡ್ ಆಫ್ ರೈಟ್ಸ್‌ನಲ್ಲಿ ದಾಖಲೆ ಇರಬೇಕೆಂದು ೧೮೬೦ ರಲ್ಲೇ ಮಾಡಿದ್ದರು. ಅದರಂತೆ ಇನಾಂಗಳು ರಿಕಾರ್ಡ್ ಆಫ್ ರೈಟ್ಸ್ ರಿಕಾರ್ಡುಗಳಲ್ಲೂ ಬರುತ್ತಿತ್ತು. ದತ್ತಿಗೆ ಸಂಬಂಧಪಟ್ಟ ಎಲ್ಲ ವಿವರಗಳೂ ಇದರಲ್ಲಿರುತ್ತಿದ್ದವು. ಇವರ ಅನುಭವದಲ್ಲಿರುವವರು ಭೂಮಿಯನ್ನು ಸಾಗು ಮಾಡಿಕೊಂಡು ದೇವಾಲಯಗಳ ಹಾಗೂ ಮಠಗಳ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದರು. ಮಠಗಳ ಕೆಲಸಗಳನ್ನು ಮಠಾಧಿಪತಿಗಳು ಮಾಡಿಕೊಂಡು ಬರುತ್ತಿದ್ದರು. ಇದರಲ್ಲಿ ಕೆಲವು ಮಠಗಳು ಒಳ್ಳೆಯ ಕೆಲಸಗಳನ್ನು ಮಾಡಿ ಅದರಿಂದ ಬರುವ ಉತ್ಪತ್ತಿಯನ್ನು ಸದ್ವಿನಿಯೋಗ ಮಾಡುತ್ತಿದರು. ಆದರೆ ಕೆಲವು ಕಡೆ ಇದ್ದ ಮಠಗಳು ಸರಿಯಾಗಿ ಕೆಲಸಗಳನ್ನು ಮಾಡದೆ ಅದಕ್ಕೆ ಬರುವ ಉತ್ಪತ್ತಿಯನ್ನು ದುರ್ವಿನಿಯೋಗ ಮಾಡುತ್ತಿದರು ಕೆಲವರು ಬಹಳ ಉತ್ತಮವಾದ ಸಮಾಜ ಸೇವೆಯನ್ನೂ ಮಾಡಿಕೊಂಡು ಬರುತ್ತಿದ್ದಾರೆ. ಎಲ್ಲರೂ ಹೀಗೆ ಮಾಡುತ್ತಾರೆಂದು ನಾನು ಹೇಳುತ್ತಿಲ್ಲ. ಇಂದು ಕೂಡ ಅತ್ಯುತ್ತಮವಾಗಿ ಕೆಲಸ ಮಾಡುವ ಗುಡಿಗಳೂ ಇವೆ ಮತ್ತು ಮಠಗಳೂ ಇವೆ. ಅವು ಸಮಾಜದ ಜನಕ್ಕೆ ಬೇಕಾಗುವಂತಹ ಉತ್ತಮ ಕೆಲಸಗಳನ್ನು ಮಾಡುತ್ತಿವೆ. ಅನೇಕ ಕಡೆಗಳಲ್ಲಿ ಶಾಲಾ ಕಾಲೇಜುಗಳನ್ನು ತೆರದು ಅನೇಕರಿಗೆ ವಿದ್ಯಾದಾನ ಮಾಡುತ್ತವೆ. ಇಂತಹ ಮಠಗಳಿಗೆ ಹಾಗೂ ಧಾರ್ಮಿಕ ಸಂಸ್ಥೆಗಳಿಗೆ ಸರಕಾರ ಇನ್ನೂ ಹೆಚ್ಚು ಉತ್ತೇಜನ ಕೊಟ್ಟು ಇವುಗಳು ಮುಂದೆ ಬರಲು ಸಹಾಯ ಮಾಡಬೇಕು. ಹಿಂದೆ ರಾಜ ಮಹಾರಾಜರುಗಳು ಕೊಟ್ಟಿದ್ದ ಇನಾಂಗಳನ್ನು ಈಚೆಗೆ ರಿಲಿಜಸ್ ಎಂಡೋಮೆಂಟ್ಸ್ ಚಾರಿಟಬಲ್ ಇನ್‌ಸ್ಟಿಟ್ಯೂಷನ್‌ಗಳ ಬಿಲ್ಲು ತಂದು ಅವನ್ನು ರದ್ದು ಮಾಡಲಾಗಿದೆ. ಹಿಂದೆ ಇನಾಂ ಜಮೀನುಗಳನ್ನು ಯಾರು ಸಾಗು ಮಾಡಿಕೊಂಡು ರಕ್ಷಣೆ ಮಾಡಿಕೊಂಡು ಬರುತ್ತಿದ್ದರೋ ಅವರನ್ನು ಪ್ರೊಟೆಕ್ಟೆಡ್ ಟೆನೆಂಟ್ಸ್ ಹಾಗೂ ಪರ್ಮನೆಂಟು ಟೆನೆಂಟುಗಳಾಗಿ ಮಾಡಬೇಕು. ಇಲ್ಲಿದ್ದ ಜನ ಬಹುತ್ತೇಕ ಪೂಜಾರಿಗಳೇ ಅವರು ಇದನ್ನು ಚೆನ್ನಾಗಿ ಬೆಳೆಸಿಕೊಂಡು ಬರುತ್ತಿದ್ದುದರಿಂದ ಇವರಿಗೆ ಆ ಭೂಮಿ ಕೊಡಬೇಕಾಗುತ್ತದೆ. ಈಚೆಗೆ ಸರಕಾರ ಉಳುವವನೇ ಹೊಲದ ಒಡೆಯನಾಗಬೇಕು ಎಂದು ಹೇಳಿ ಅದಕ್ಕನುಗುಣವಾದ ಒಂದು ಕಾನೂನು ತರಬೇಕೆಂದು ಇಲ್ಲಿ ಇಂತಹ ಒಂದು ಕಾನೂನು ತಂದಿದ್ದಾರೆ. ಆದುದರಿಂದ ಆಯಾ ಪ್ರದೇಶಗಳಲ್ಲಿರುವ ರೈತರಿಗೆ ಇದ್ದ ಜಮೀನುಗಳು ಕೆಲವು ಸಂದರ್ಭಗಳಲ್ಲಿ ಅವರ ಕೈಬಿಡುವುದು. ಈಗ ದೇವಾಲಯಗಳನ್ನೆಲ್ಲ ಸರಕಾರ ವಹಿಸಿಕೊಂಡು ಇಲ್ಲಿನ ಕೆಲಸಗಳು ನಡೆಯಲು ತಸ್ದಿಕ್ ಅಲೋಯನ್ಸ್ ಎಂದು ಕೊಡಬೇಕು ಎನ್ನುವ ಉದ್ದೇಶ ಇದರಲ್ಲಿದೆ. ಇದರಲ್ಲಿ ಕೆಲವು ನ್ಯೂನತೆಗಳು ಬರಬಹುದು. ನಮ್ಮ ಮುಂಬಯಿ ಭಾಗದಲ್ಲಿದ್ದ ಕರ್ನಾಟಕದ ಭಾಗಗಳಲ್ಲಿ ಅನೇಕ ಜನ ಮಠಗಳನ್ನು ಹಾಗೂ ಗುಡಿಗಳನ್ನು ಬಾಂಬೆ ಪ್ರೋಬ್ಲಿಕ್‌ಟ್ರಸ್ಟ್ ಆಕ್ಟ್ ಪ್ರಕಾರ ರಿಜಿಸ್ಟರು ಮಾಡಿಸಿ ಕೊಂಡಿರುತ್ತಾರೆ. ಇದರ ಪ್ರಕಾರ ಇಲ್ಲಿರುವ ಚಾರಿಟಿ ಕಮಿಷನರ್ ಎನ್ನುವ ಅಧಿಕಾರಿಗಳಿಗೆ ಇವರ ಎಲ್ಲ ಲೆಕ್ಕಪತ್ರಗಳನ್ನೂ ಕೊಡಬೇಕು. ಅನೇಕ ಸಂಸ್ಥೆಗಳು ಅವರು ಲೆಕ್ಕ ಪತ್ರಗಳನ್ನು ಕೊಡುವಾಗ ಸುಮಾರು ಲಕ್ಷಗಟ್ಟಲೆ ಆದಯ ಸಂಪಾದನೆ ಮಾಡುತ್ತಿದ್ದರೂ ಕೂಡ ಕೇವಲ ಒಂದೆರಡು ಸಾವಿರ ರೂಪಾಯಿಗಳ ಲೆಕ್ಕಪತ್ರಗಳನ್ನು ಮಾತ್ರ ಇಲ್ಲಿ ತೋರಿಸುತ್ತಿದ್ದರು. ಇದನ್ನು ತಪ್ಪಿಸಲು ಅನುಕೂಲವಾಗುವಂತೆ ಇಂದು ತಂದಿರುವ ಕಾನೂನಿನಲ್ಲಿ ತಸ್ದಿಕ್ ಅಲೋಯನ್ಸ್‌ಗಳೆಂದು ಕೊಡುವಾಗ ಇಷ್ಟೇ ಮೊತ್ತ ಕೊಡಬೇಕು ಎನ್ನುವುದನ್ನು ನಿಗದಿ ಮಾಡಿದರೆ ಸರಿಯಾಗುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ. ಇಲ್ಲಿ ಕಳೆದ ಐದುವರ್ಷಗಳಿಂದ ಯಾವ ರೀತಿ ಉತ್ಪನ್ನಗಳು ಬರುತ್ತಿತ್ತು ಇದರ ಮೇಲೆ ತಸ್ದಿಕ್ ಅಲೋಯನ್ಸ್‌ಗಳನ್ನು ನಿಗದಿ ಮಾಡಲು ಸಕ್ತವಾದ ಕಾರ್ಯಕ್ರಮಗಳನ್ನ ತೆಗೆದುಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ. ಇದರಿಂದ ದುರ್ವ್ಯವಹಾರಗಳು ಕಡಿಮೆ ಯಾಗಲು ಸಹಾಯವಾಗುತ್ತದೆ. ಸಾವಿರಾರು ಸಂಸ್ಥೆಗಳು ಇಂದು

ಇವೆ. ಇವು ಸಮುದ್ರದ ನೀರಿನಂತೆ ಬಹಳವಾಗಿರುವುದರಿಂದ ಇದರ ಪೂರ್ಣ ವಿಚಾರಗಳನ್ನು ಸರಿಯಾಗಿ ತಿಳಿದು ಕೊಳ್ಳುವುದೂ ಕಷ್ಟವಾಗುತ್ತವೆ. ಆದುದರಿಂದ ಸಂಸ್ಥೆಗಳು ಇನ್ನು ಮುಂದೆ ಕೂಡ ಅವರ ಕೆಲಸಗಳನ್ನು ಕುಂಠಿತವಾಗದಂತೆ ಕೆಲಸಗಳನ್ನು ಮಾಡಲು ಅವಕಾಶ ಮಾಡಿಕೊಡಬೇಕು. ಜಮೀನುಗಳನ್ನು ಯಾರು ಉತ್ತು ಸಾಗು ಮಾಡುತ್ತಿದ್ದರೋ ಅಂತಹವರಿಗೇ ಕೊಡುವಾಗ ಇದರಲ್ಲಿರುವ ಐತಿಹಾಸಿಕ ಹಿನ್ನಲೆಗಳೇನು ಎನ್ನುವುದನ್ನೂ ಕೂಲಂಕಷವಾಗಿ ವಿಚಾರ ಮಾಡಿ ಮುಂದುವರಿಯುವುದು ಸರಿಯಾಗಿರುತ್ತದೆ. ಈ ಕಾನೂನಿನಂತೆ ಕೆಲವು ಹಳ್ಳಿಗಳಲ್ಲಿ ಚಾರಿಟಬಲ್ ಸಂಸ್ಥೆಗಳು ಇರುತ್ತವೆ ಅವಕ್ಕೆ ಕೆಲವು ಕಡೆ ಜಮೀನುಗಳೂ ಇರುತ್ತವೆ, ಇಂತಹ ವಿಚಾರದಲ್ಲಿ ಬಾಂಬೆ ಕರ್ನಾಟಕದ ಭಾಗಗಳಾದ ಬಿಜಾಪುರ, ಧಾರವಾಡ, ಬೆಳಗಂ ಮತ್ತು ಹೈದರಾಬಾದು ಭಾಗದ ಬೀದರೂ ಹಾಗು ಗುಲ್ಬರ್ಗಾ, ರಾಯಚೂರು ಇಂತಹ ಜಿಲ್ಲೆಗಳಲ್ಲಿ ಪರ್ಮನೆಂಟ್ ಟೆನಂಟುಗಳು ಇದ್ದಾರೆ ಮತ್ತು ಇವರು ರಾಜಮಹಾರಾಜರುಗಳ ಕಾಲದಿಂದಲೂ ಇವರೇ ಖಾಯಂ ಕುಳಗಳಾಗಿ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಇವರು ಸಂಪೂರ್ಣವಾಗಿ ಉಳಿಯಲು ಯಾವ ರೀತಿ ಇರಬೇಕೆಂದು ಇಲ್ಲಿರುವ ಸೆಕ್ಷನ್ ೪ ರಲ್ಲಿ ಹೇಳಿದ್ದಾರೆ. ಇದರಲ್ಲಿರುವಂತೆ ಪರ್ಮನೆಂಟು ಟೆನೆಂಟುಗಳಿಗೆ ಲ್ಯಾಂಡ್ ರೆವೆನ್ಯೂನಿನ ೨೦ ಪಟ್ಟು ಕೊಡುವವರನ್ನು ಆಕ್ಯುಪೆಂಟು ಎಂದು ತೆಗೆದುಕೊಳ್ಳಬೇಕು ಎಂದು ಇವೆ. ಆ ನಂತರ ಒಂದು ಹೊಸ ಸೆಕ್ಷನ್ ೫ ಎಂದು ಇದರಲ್ಲಿ ಲ್ಯಾಂಡ್ ರೆವಿನ್ಯೂ ಜೊತೆಗೆ ಲ್ಯಾಂಡ್ ರೆವೆನ್ಯೂವಿನ ಐವತ್ತು ಪಟ್ಟಿನಷ್ಟು ಹಣ ಕೊಡುವ ಪ್ರೊಟೆಕ್ಟೆಡ್ ಟೆನಂಟನ್ನು ಆಕ್ಯುಪಂಟ್ ಆಗಿ ರಿಜಿಸ್ಟರ್ ಹೆಚ್ಚು ಹೆಚ್ಚು ಬಾಧ್ಯತೆಗಳು ಇರುತ್ತವೆ. ಇದನ್ನು ಒದಗಿಸಿಕೊಡಬೇಕಾಗುತ್ತದೆ. ಇದೇ ರೀತಿ ಪ್ರೊಟೆಕ್ಟೆಡ್ ನೆಂಟುಗಳಿಗೂ ಮಾಡಬಹುದು ಎಂದೂ ಹೇಳಲಾಗಿದೆ ಇದರಲ್ಲಿ ಪರ್ಮನೆಂಟುಟೆನೆಂಟುಗಳಿಗೊ ಹೆಚ್ಚು ಹಕ್ಕುಬಾಧ್ಯತೆಗಳು ಇರುತ್ತವೆ. ಇದನ್ನು ಒದಗಿಸಿಕೊಬೇಕಾಗುತ್ತದೆ. ಇದೇರೀತಿ ಪ್ರೊಟೆಕ್ಟಡ್‌ಟೆನೆಂಟುಗಳಿಗೂ ಒದಗಿಸಿ ಕೊಡುವಾಗ ಕಳೆದ ಹನ್ನೆರಡು ವರ್ಷಗಳಿಂದಲೂ ಯಾರು ಸಾಗು ಮಾಡುತ್ತಿದ್ದರು ಮತ್ತು ಅವರ ಬಗ್ಗೆ ರಿಕಾರ್ಡ್‌ಆಫ್ ರೈಟ್ಸ‌ನಲ್ಲಿ ದಾಖಲೆಗಳು ಇವೆಯೋ; ಅದು ಯಾರಹೆಸರಿನಲ್ಲಿದೆ ಎಂಬುದನೆಲ್ಲಾ ಸರಿಯಾಗಿ ವಿವೇಚನೆ ಮಾಡಿನೋಡಿ ಕೊಡಬೇಕಾಗುತ್ತದೆ. ೫೦ ಪಟ್ಟು ಹಣ ಹತ್ತು ಇನ್‌ಸ್ಟಾಲ್‌ಮೆಂಟುಗಳಲ್ಲಿ ಕೊಡುವಾಗ ಜಮೀನು ಮಾಲೀಕರುಗಳಿಗೆ ತೊಂದರೆಯಾಗದಂತೆ ಕೊಡಬೇಕು.

ಮುಂದೆ ಸಕ್ಷನ್ ೬ ರಲ್ಲಿ ಇತ್ತರೇಟೆನೆಂಟ್ಸ್ ಬಗ್ಗೆ ಈ ಕೆಳಗಿನಂತೆ ಹೇಳಿದ್ದಾರೆ :-

"6. Other tenants to be tenants under State Government. Every tenant of the Inamdar other than a permanent tenant or a protected tenant shall, with effect from and on the appointed date and subject to the provisions f Chapter IV be entitled to be continued as a tenant under the State Government in respect of the land of which he was a tenant under the inamdar immediately before the date of vesttng."

ಈ ರೀತಿ ಪರ್ಮನೆಂಟ್ ಟೆನೆಂಟ್ಸ್ ಮತ್ತು ಪ್ರೊಟೆಕ್ಟೆಡ್ ಟೆನೆಂಟ್ಸ್ ಅಲ್ಲದಿರುವವರು ಸಹ ಸರ್ಕಾರಿ ಜಮೀನಿನ ಮಾಲೀಕರಾಗಬಹುದು ಎಂದು ಹೇಳಿರುವುದು ಬಹಳ ಉತ್ತಮವಾದುದಾಗಿದೆ. ಸೆಕ್ಷನ್ ೭ರಲ್ಲಿ ಪೂಜಾರಿ, ಅರ್ಚಕರು, ಮುಲ್ಲಾ ಮುಂತಾದವರು ಸಹ ಕೆಲವು ಷರತ್ತುಗಳ ಮೇಲೆ ಜಮೀನಿನ ಮಾಲೀಕರಾಗಬಹುದೆಂದು ಹೇಳಲಾಗಿದೆ.

"7. Pujari, archak, etc., to be registered as an occupant on certain conditions.-(1) Where the inamdar is an institution of religious worship, a person ...

i) rendering religious service in or maintaining the institution as a pujari, archak, mulla, kazi, mutawalli, muthsaddi. priest or holder of a similar office by whatever name called, or

(ಶ್ರೀ ಬಿ. ಜಿ. ಬಣಕಾರ್)

(ii) rendering any service in such institutions and personally cultivating for a continuous period of not less than three years prior to the appointed date by contributing his own physical labour or that of the members of his family and enjoying the benefits of any land comprised in the inam of such institution without paying rent as such in money or in kind to that institution in respect of such land, shall, with effect from and on the appointed date and subject to the provisions of sub section (2) and section 31 be entitled to be registered as an occupant of such land."

ಈ ರೀತಿ ಹೇಳಿರುವುದರಿಂದ ನಿಜವಾಗಿಯೂ ಸಾಗುವಳಿ ಮಾಡುವವರು ಭಯಪಡಬೇಕಾಗಿಲ್ಲ. ಇದೇ ಸೆಕ್ಷನ್ನಿನ ಎರಡನೇ ಸಬ್ ಕ್ಲಾಸಿನಲ್ಲಿ.

"under sub-section (1) shall be liable to pay to the State Government as premium for acquisition of ownership of that land an amount equal to one hundred times the land revenue of such land

ಎಂದು ಹೇಳಿರುವುದನ್ನು ನೋಡಿದರೆ, ಇವರಿಗೆ ಅನೇಕ ರೀತಿಯ ಸವಲತ್ತುಗಳನ್ನು ಮಾಡಿ ಕೊಟ್ಟಿದ್ದಾರೆಂದು ಹೇಳಬಹುದು. ಸೆಕ್ಷನ್ ೮ ರಲ್ಲಿ ಮೈನರ್ ಇನಾಂ ಬಗ್ಗೆ ಹೇಳಲಾಗಿದೆ. ಈ ಸೆಕ್ಷನ್ ಪ್ರಕಾರ ಕೆಲವು ಷರತ್ತುಗಳಿಗೆ ಒಳಪಟ್ಟು ಜಮೀನಿನ ಮಾಲೀಕರಾಗಬಹುದೆಂದು ಹೇಳಲಾಗಿದೆ. ಈ ಒಂದು ಮಸೂದೆ ಜಾರಿಗೆ ಬಂದಮೇಲೆ ಪರ್ಮನೆಂಟ್ ಟೆನೆಂಟ್ಸಿಗೆ ಆಗಲೀ ಪ್ರೊಟೆಕ್ಟೆಡ್ ಟೆನೆಂಟ್ಸಿಗೆ ಆಗಲೀ, ಪೂಜಾರಿಗಳಿಗಾಗಲೀ ತಮ್ಮ ಹಕ್ಕುಭಾಧ್ಯತೆಗಳ ಬಗ್ಗೆ ಏನಾದರು ಸಂಶಯ ಬಂದರೆ, ಏನಾದರು ಅನ್ಯಾಯವಾಗುವ ಸಂಭವವಿದ್ದರೆ, ಅಂತಹವರು ಡಿ. ಸಿ. ಕಡೆಗೆ ಅರ್ಜಿ ಕೊಡುವುದಕ್ಕೆ ಅವಕಾಶ ಕೂಡ ಇದೆ. ಮತ್ತು ಅಂತಹ ಅರ್ಜಿಗಳನ್ನು ತೀರ್ಮಾನ ಮಾಡುವ ಅಧಿಕಾರವನ್ನು ಸರ್ಕಾರದವರು ಅವರಿಗೆ ಕೊಟ್ಟಿದ್ದಾರೆ. ಸೆಕ್ಷನ್ ೨೩ರಲ್ಲಿ ಈ ಬಗ್ಗೆ ಉಲ್ಲೇಖ ಮಾಡಿದ್ದಾರೆ ಒಟ್ಟಿನಲ್ಲಿ ಹೇಳುವುದಾದರೆ ಅನೇಕ ತರಹದ ಅನುಕೂಲಗಳನ್ನು ಈ ವರ್ಗದ ರೈತರಿಗೆ ಮಾಡಿಕೊಡಲಾಗಿದೆ ನಿಜವಾಗಿಯೂ ಇದು ಒಂದು ಕ್ರಾಂತಿಕಾರಕವಾದ ಬಿಲ್ ಎಂದು ಹೇಳಬಹುದು. ಮಾನ್ಯ ಮಂತ್ರಿಗಳು ಒಳ್ಳೆಯ ರೀತಿಯಿಂದ ವಿಚಾರ ಮಾಡಿ ರೈತರ ಹಿತ ದೃಷ್ಟಿಯಿಂದ, ೭ ಜಿಲ್ಲೆಗಳಲ್ಲಿರುವ ದೇವಸ್ಥಾನಗಳ ಹಿತದೃಷ್ಟಿಯಿಂದ ಈ ಬಿಲ್‌ನ್ನು ಸಭೆಯ ಮುಂದೆ ಮಂಡಿಸಿದ್ದಾರೆ ಇದು ತುಂಬಾ ಶ್ಲಾಘನೀಯವಾದುದಾಗಿದೆ. ಇಂತಹ ಒಂದು ಉತ್ತಮವಾದಂಥ ಮಸೂದೆಯನ್ನು ಪ್ರತಿಯೊಬ್ಬರೂ ಬೆಂಬಲಿಸಿ ಪಾಸ್ ಮಾಡುವುದಕ್ಕೆ ಒಪ್ಪಿಗೆ ಕೊಡಬೇಕು. ಮತ್ತು ಆದಷ್ಟು ತೀವ್ರವಾಗಿ ಇದು ಕಾರ್ಯರೂಪದಲ್ಲಿ ಬರುವುದಕ್ಕೆ ಸರ್ಕಾರದವರು ಮುತುವರ್ಜಿವಹಿಸಬೇಕೆಂದು ಒತ್ತಿ ಹೇಳುತ್ತೇನೆ. ಈ ಉತ್ತಮವಾದ ಬಿಲ್‌ಗೆ ನನ್ನ ಸಂಪೂರ್ಣವಾದ ಬೆಂಬಲ ಇದೆ ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಈ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

5-30 P.M.

[*Mr. Deputy Speaker in the Chair*]

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).— ಸನ್ಮಾನ್ಯ ಉಪಾಧ್ಯಕ್ಷರೇ ಕರ್ನಾಟಕ ರಾಜ್ಯ ರಚನೆಯಾಗಿ ೧೫-೧೬ ವರ್ಷಗಳ ನಂತರವಾದರೂ ಈ ಒಂದು ವಿಧೇಯಕವನ್ನು ಮಂಡಿಸುತ್ತಿರುವುದಕ್ಕಾಗಿ ನಾವು ಸ್ವಾಗತ ಮಾಡುತ್ತೇವೆ. ಈ ವಿಳಂಬದ ಬಗ್ಗೆ ನಾವು ಇದೇ ಸಮಯದಲ್ಲಿ ವಿಷಾದವನ್ನು ಕೂಡ ವ್ಯಕ್ತಪಡಿಸುವುದಕ್ಕೆ ಅಪೇಕ್ಷೆ ಮಾಡುತ್ತೇವೆ. ಮಾನ್ಯ [illegible] ಅವರು ನನ್ನ ಮಾತನಾಡುವಾಗ ಏನೇನು ಹೇಳಿದ್ದಾರೆ ಅವೆಲ್ಲಕ್ಕೂ ನಾವು ಸಂಪೂರ್ಣವಾದ ಬೆಂಬಲ ಕೊಡುತ್ತೇವೆ. ಮತ್ತು ಮಾನ್ಯ

ಹಿರಿಯ ಸದಸ್ಯರಾದ ಶ್ರೀ ಪ್ರಭಾಕರ್ ಅವರು ಮಾತನಾಡುವಾಗ ಧರ್ಮ ಮತ್ತು ಸಮಾಜದ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದರು ಕನ್ನಡ ಕವಿಗಳಾದ ಗೋಪಾಲಕೃಷ್ಣ ಅಡಿಗಾ ಅವರು ಧರ್ಮ, ಸ್ವಾರ್ಥ, ದೇವರು, ಇವೆಲ್ಲದರ ಬಗ್ಗೆ ತುಂಬಾ ಚೆನ್ನಾಗಿ ಹೇಳಿದ್ದಾರೆ ಅದು ಈ ರೀತಿ ಇದೆ "ಸ್ವಾರ್ಥದ ವೇದಿಕೆಯಲ್ಲಿ ನಿರ್ದಯತೆಯ ಯಜ್ಞಕುಂಡ ಹೂಡಿ, ವಿಷಯ ವಿಲಾಸದ ಬೆಂಕಿಯೊಟ್ಟಿದರು ಹೋಗರಾಜ್ಯ ನೀಡಿ , ಗುರುಗಳು ರಾಜರು, ವಣಿಜರು ದೀನದುರ್ಬಲ ಮಾನವಾಳಿ ಯೂಪಸ್ತಂಭವೆ ದೇವರ ಬಿಂಬವು ಎಂದು ಭ್ರಮಿಸಿ ಬಾಗಿ ಕೊರಳ ನಿರಿದರೂ ಕೆರಳಲಿಲ್ಲ ಇಲ್ಲ. ಉದಿಕೊಂಡಿರು ಒದೆಯಲಿಲ್ಲ. ಧರ್ಮವಾಕ್ಯ ಪಿಸಾರಿ. ಧರ್ಮದ ತೆರೆ ಮರೆಯಲ್ಲಿ ನಡವ ನರಹಿಂಸೆ ಇನ್ನು ಸಾಕು, ಮನುಜ ಹೃದಯ ಅನ್ಯಾಯ ರಾಕ್ಷಸನ ಗೆದ್ದು ಬದಕ ಬೇಕು " ಎಂದು ಹೇಳಿದ್ದಾರೆ. ಈ ವಿಧೇಯಕದ ಬಗ್ಗೆ ಹೇಳುವುದಾದರೆ ಇನ್ನು ನಮಗೆ ಧರ್ಮದ ತೆರೆ ಮರೆಯಲ್ಲಿ ನಡವ ನರಹಿಂಸೆ ಸಾಕು. ಮಾನವನಿಗೆ ಅನ್ನ ಮತ್ತು ಬಟ್ಟೆಗೆ ನೆರವು ಆಗತಕ್ಕಂಥಾ ವ್ಯವಸ್ಥೆ ಬೇಕು. ಈ ವಿಧೇಯಕ ಕ್ರಾಂತಿಕಾರಿಯಲ್ಲದಿದ್ದರೂ ಕುರುಡುಗಣ್ಣಿಗಿಂತ ಮೆಳ್ಳಗಣ್ಣೇ ವಾಸಿ ಎನ್ನುವ ಹಾಗೆ ರೈತರಿಗೆ ಸ್ವಲ್ಪಮಟ್ಟಿಗೆ ಅನುಕೂಲವಾಗತಕ್ಕಂಥ ಈ ಒಂದು ವಿಧೇಯಕವನ್ನು ಈಗ ಇಲ್ಲಿ ತಂದಿದ್ದಾರೆ. ಸಮಾಜದಲ್ಲಿ ಧರ್ಮ ಯಾವಾಗ ಪ್ರಾರಂಭ ವಾಯಿತ್ತು, ದೇವರು, ದೇವಸ್ಥಾನ ಇವುಗಳೆಲಾ ಆರಂಭವಾದ ಇತಿಹಾಸವನ್ನು ಸ್ವಲ್ಪ ನೋಡಿದರೆ, ಗಮನಿಸಿದರೆ ನಮಗೆ ಅರ್ಥವಾಗುತ್ತದೆ ಯಾವ ವೇದ ಗಳಲ್ಲಾಗಲೀ, ಯಾವ ಪುರಾಣಗಳಲ್ಲಾಗಲೀ ದೇವಾಲಯಗಳ ವಿಷಯಗಳು ಎಲ್ಲೂ ಬರುವುದಿಲ್ಲ. ಇವು ಯಾವಾಗ ಬರುತ್ತೆವೆ ಎಂದರೆ ಚಂದ್ರಗುಪ್ತ ಮೌರ್ಯ ಕಾಲದಲ್ಲಿ ಚಾಣಕ್ಯನು ಮಂತ್ರಿಯಾಗಿದ್ದ ಕಾಲದಲ್ಲಿ ದೇವಸ್ಥಾನಗಳ ಪ್ರಸ್ತಾಪವನ್ನು ನಾವು ಐತಿಹಾಸಿಕವಾಗಿ ನೋಡುತ್ತೇವೆ. ಯವ ಕಾರಣದಿಂದ ಆಗ ಚಾಣಕ್ಯನು ಈ ದೇವಾಲಯಗಳನ್ನು ಸ್ಥಾಪಿಸಿದ ಎಂದರೆ ಚಾಣಕ್ಯ ತನ್ನ ನಂಬಿಕಸ್ಥ ಜನರನ್ನು ಎಲಾ ಕಡೆ ಗಳಲ್ಲೂ, ಎಲ್ಲಾ ಗ್ರಾಮಗಳಲ್ಲೂ ಇಟ್ಟು ತನ್ನ ಅಧಿಕಾರ ಸೂತ್ರವನ್ನು ಭದ್ರ ಮಾಡಿಕೊಳ್ಳುವ ಉದ್ದೇಶ ದಿಂದ ಎಲ್ಲಾ ಕಡೆಗಳಲ್ಲೂ ದೇವಾಲಯಗಳನ್ನು ಸ್ಥಾಪನೆ ಮಾಡಿದ. ಆ ದೇವಸ್ಥಾನಗಳಲ್ಲಿ ತನ್ನವರಿಗೆಲಾ ಉದ್ಯೋಗವನ್ನು ರಚಿಸಿ ಕೊಟ್ಟು ಎಂದು ಇತಿಹಾಸದಿಂದ ಗೊತ್ತಾಗುತ್ತದೆ. ವಿದಕ್ಯಮತರಿಂದ ಜನಗಳಿಗೆ ಜ್ಞಾನವನ್ನು ಉಪದೇಶ ಮಾಡತಕ್ಕ ನೆಪದಲ್ಲಿ ದೇವಾಲಯಗಳನ್ನು ಸ್ಥಾಪನೆ ಮಾಡಿದನು ಚಾಣಕ್ಯನು ಈ ಮೂಲಕ ತನ್ನ ಅಧಿಕಾರವನ್ನು ಭದ್ರ ಮಾಡಿಕೊಳ್ಳಲು ದೇವಲಾಯಗಳನ್ನು ಸ್ಥಾಪನೆ ಮಾಡಿ ಅವರ ಜೊತೆ ಯಲ್ಲಿ ಅವನ ನಂಬಿಕಸ್ಥ ಜನರಿಗೆ ಅಲ್ಲಿ ಉದ್ಯೋಗವನ್ನು ಕಲ್ಪಿಸಿ ಕೊಟ್ಟು. ಜನಸಾಮಾನ್ಯರಿಂದ ಕಾಣಿಕೆಯ ರೂಪದಲ್ಲಿ ವರಮಾನವನ್ನು ಪಡೆಯತಕ್ಕ ಒಂದು ಉದ್ದೇಶವೂ ಇದರಲ್ಲಿ ಇತ್ತು. ಈ ಎರಡು ಕಾರಣಗಳಿಂದ ಗ್ರಾಮಗಳಲ್ಲಿ ದೇವಾಲಯವನ್ನು ಸ್ಥಾಪನೆ ಮಾಡಿದರು ಎಂದು ನಮಗೆ ಇತಿಹಾಸದಿಂದ ಗೊತ್ತಾಗುತ್ತದೆ. ನಾನು ಮತ್ತೆ ಇದನ್ನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ದೇವಾಲಯಗಳಲ್ಲಿ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಸಮಾಜವನ್ನು ಶೋಷಣೆ ಮಾಡುವ ಅನೇಕ ಘಟ್ಟಗಳನು ನಾವು ಇತಿಹಾಸದಲ್ಲಿ ಕಾಣುತ್ತೇವೆ. ಈ ಶೋಷಣೆ ಪರಂಪರೆಯಾಗಿ ಬಂದಿದೆ. ಈಗ ಸರ್ಕಾರದವರು ತಂದಿರತಕ್ಕ ವಿಧೇಯಕದ ವ್ಯಾಪ್ತಿಗೆ ಒಳ ಪಟ್ಟಂತೆ ಕೆಲವರು ದೇವರ ಭೂಮಿಯನ್ನು ಇಟ್ಟುಕೊಂಡು ದೇವರ ಬಗ್ಗೆ ಅತಿ ಭಕ್ತಿಯನ್ನು ತೋರಿಸತಕ ಎಷ್ಟೋ ಜನ ಬೇರೆ ಜನರನ್ನು ಹಿಂಸೆ ಮಾಡುತ್ತಾ ಶೋಷಣೆ ಮಾಡುತ್ತಾ ನಾಸ್ತಿಕರಾಗಿದ್ದಾರೆ ಪ್ರಾಮಾಣಿಕವಾಗಿ ದೇವರ ಬಗ್ಗ ಭಕ್ತಿಯನ್ನು ಇಟ್ಟುಕೊಂಡು ವ್ಯವಹಾರ ಮಾಡತಕ್ಕ ಜನಗಳು ನಾಸ್ತಿಕ್ಕೆ ಹಾಗೆ ಕಾಣುತ್ತಾರೆ. ಆದ್ದರಿಂದ ದೇವಾಲಯ, ಧರ್ಮದ ಹೆಸರಿನಲ್ಲಿ ಶೋಷಣೆ ಮುಂದುವರಯಿತು. ಆದ್ದರಿಂದ ಈಗ ಜನರ ಅಜ್ಞಾನವನ್ನು ದುರುಪಯೋಗಪಡಿಸಕೊಂಡು ಅವರ ಹೀನವೃತ್ತಿಗೆ ಕಾರಣ ವಾಗುವಂತಹ ಪರಂಪರೆ ಮತ್ತು ಸಂಪ್ರದಾಯಗಳನ್ನು ಮೂಲಭೂತವಾಗಿ ಬದಲಾವಣೆ ಮಾಡುವವರೆಗೂ

ನಾವು ಮನುಷ್ಯರಾಗುವುದಿಲ್ಲ: ಈಗ ಮನುಧರ್ಮದ ಕಾಲ ಮುಗಿದಿದೆ. ಈಗ ನಮಗೆ ಬೇಕಾಗಿರುವುದು ಮಾನವ ಧರ್ಮ. ಆದ್ದರಿಂದ ಈಗ ನಾವು ಮಾನವ ಧರ್ಮಶಾಸ್ತ್ರದ ಕೆಳಗೆ ಬಂದು ನಿಂತಿದ್ದೇನೆ. ಮಾನವ ಧರ್ಮ ಶಾಸ್ತ್ರ ಬೆಳೆಯ ಬೇಕಾದಂತಹ ಯುಗದಲ್ಲಿ ನಾವು ಇಂದು ಇದ್ದೇವೆ. ಮಾನವ ಧರ್ಮದ ಪ್ರಜೆ ಯನ್ನು ಬೆಳಸಬೇಕಾದಂತಹ ಅವಶ್ಯಕತೆ ಇದೆ. ಇಂದಿರಗಾಂಧಿಯವರ ಕಾಂಗ್ರೆಸ್ಸಿನ ಜನ ಸಮಾಜವಾದವನ್ನು ತರುವ ಪ್ರತಿಜ್ಞೆಯನ್ನು ಮಾಡಿ ಇಲ್ಲಿ ಅಧಿಕಾರಕ್ಕೆ ಬಂದು ಕೊಳಿತುಕೊಂಡಿದ್ದಾರೆ. ಆ ಮಂತ್ರಿಮಂಡಲದಲ್ಲಿ ರತಕ್ಕವರು ಬಹಳ ಬಡವರು, ತೀರಾಬಡವರು ಇದ್ದಾರೆ, ನಿಗುಂಸಿಕಬಡವರು ಇದ್ದಾರೆ. ಆದ್ದರಿಂದ ಅವರ ಬಗ್ಗೆ ಹೇಳುವುದಕ್ಕೆ ನಾನು ಅಪೇಕ್ಷೆ ಮಾಡುವುದಿಲ್ಲ. ಶ್ರೀ ಮಾನ್ ನಂಜೇಗೌಡರು ಮತ್ತು ಶ್ರೀಮಾನ್ ವೀರಪ್ಪಗೌಡರು ನಮ್ಮ ಜೊತೆಯಲ್ಲಿದ್ದವರು. ಅವರು ನಾವು ಎಲ್ಲರೂ ಒಟ್ಟಿಗೆ ಮುಂಡ್ಯಾಕ್ಕೆ ಹೊಗಿದ್ದೆವು. ಅದಿಗೂ ವಿಷಯ ಚೆನ್ನಾಗಿ ಗೊತ್ತಿದೆ. ಶ್ರಿಮಂತಿ ಇಂದಿರಾಗಾಂಧಿಯವರ ಪಾಲಸಿ ಏನು ಅವರು ಡ್ಯಾ ಲೋಹಿಯಾ ಅವರ ಸಮಾಜವಾದವನ್ನು ಅಪಬ್ರಂಶವಾಗಿ ಉಪಯೋಗಿಸುತ್ತಿದಾರೆ. ಅವರ ಸಮಾಜ ವಾದವನ್ನು ತರುವ ಅಪೇಕ್ಷೆ ಇರತಕ್ಕ ಮಂತ್ರಿಗಳ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಹಿಂದೆ ಹಳೆಯ ಮೈಸೂರಿನಲ್ಲಿ ಇನಾಮ್ ರದ್ದಿಯಾತಿ ಕಾನೂನನ್ನು ಶ್ರೀಮನ್ ಕಡಿದಾಳ್ ಮಂಜಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ತಂದರು. ಅವರು ಆ ಕಾನೂನನ್ನು ತಂದಾಗ ಶೃಂಗೇರಿ ಜಹಗೀರ್‌ದಾರರು ಎಷ್ಟೋ ಶಾಪವನ್ನು ಹಾಕಿದರು, ಬೆದರಿಕೆಯನ್ನು ಹಾಕಿದರು. ಈಗ ಈ ಕಾನೂನು ತಂದಿರುವ ಶ್ರೀಮಾನ್

(ಶ್ರೀ ಕೋಣಂದೂರು ಲಿಂಗಪ್ಪ)

ಕುಂಚ್ಚವಾಸ್ತಿಗೌಡರಿಗೆ ಶಾಪ ಮತ್ತು ಬೆದರಿಕೆಗಳು ಬಂದಿವೆಯೋ ಇಲ್ಲವೋ ಗೊತ್ತಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಪ್ರಸ್ತಾಪಿಸುತ್ತೇನೆ. ಈ ಮಂತ್ರಿ ಮಂಡಲದಲ್ಲಿ ಬಡವರು ಇದ್ದಾರೆ. ಬಹಳ ಬಡವರು, ಮತ್ತೊಬ್ಬರು ಎಲ್ಲಕ್ಕಿಂತ ಬಡವರು ಈ ಮಂತ್ರಿಮಂಡಲದಲ್ಲಿದ್ದಾರೆ. ಅವರು ಶ್ರೀಮಾನ್ ಘೋರ್ಪಡೆಯವರು. ಅವರು ಸೊಂಡೂರಿನ ಮಾಜಿ ಮಹಾರಾಜರು. ಈಗ ಮುಂಬೈ ಮತ್ತು ಹೈದರಾಬಾದ್ ಕರ್ನಾಟಕದ ಮತ ಸಂಬಂಧವಾದ ಹಾಗು ಧರ್ಮಾಹಾಯ ಇನಾಂ ರದ್ದಿಯಾತಿಗೆ ಸಂಬಂಧಪಟ್ಟ ಹಾಗೆ ಈ ವಿಧೇಯಕವನ್ನು ತಂದಿರತಕ್ಕ ಮಾನ್ಯ ರೆವಿನ್ಯೂ ಮಂತಿಗಳು ಸೊಂಡೂರಿನ ಇನಾಮ್ ರದ್ಧಿಯಾತಿ ವಿಷಯವನ್ನು ಏತಕ್ಕೆ ತರಲಿಲ್ಲ ಎಂದು ನಾನು ಕೇಳುತ್ತೇನೆ.

ಸೊಂಡೂರು ಜಹಗೀರಿನ ಬಗ್ಗೆ ಒಂದು ಸರ್ಕಾರದವರು ಈ ವ್ಯಾಖ್ಯವನ್ನು ಇದರಲ್ಲಿ ಸೇರಿಸಿದ್ದರೆ ಚೆನ್ನಾಗಿತ್ತು.

MR. DEPUTY SPEAKER.- The Hon Member cannot make a negative speech on the Bill now. He can refer to this matter on some other occasion.

ಶ್ರೀ ಕಾಗೋಡು ತಿಮ್ಮಪ್ಪ.—ಇದೇ ಕಾನೂನಿನ ವ್ಯಾಪ್ತಿಯೊಳಗೆ ಸೊಂಡೂರಿನ ಇನಾಂ ಜಹಗೀರಿನ ವಿಚಾರವನ್ನೂ ಸೇರಿಸಬಹುದಾಗಿತ್ತು ಎಂದು ಅವರು ಹೇಳುತ್ತಿರುವುದು. ಏಕೆಂದರೆ ಒಂದು ಭಾಗದ ಇನಾಂನ ಬಗ್ಗೆ ಕಾನೂನನ್ನು ತಂದು ಇನ್ನೊಂದು ಭಾಗದ ಇನಾಂನ್ನು ಹಾಗೆಯೇ ಉಳಿಸಿ, ನೀವು ತಾರತಮ್ಯವನ್ನು ಮಾಡುತ್ತಿದ್ದೀರಿ ಎಂದು ಹೇಳುತ್ತಿದ್ದಾರೆ.

He is just making out a case so that the Government could bring another amendment to include the abolition of Sandur Inams within this Bill.

MR. DEPUTY SPEAKAR.— The Hon Member was a member of the Joint Select Committee. had he raised it there?

SRI. KAGODU THIMMAPPA.— There we were restricted within the scope of the Bill which was referred to the committee.

MR DEPUTY SPEAKER.Here also he cannot enlarge the scope of the Bill.

ಶ್ರೀ ಎ. ಶಂಕರ ಅಳ್ವ.— ಇದು ಹೈದರಾಬಾದ್ ಬಾಂಬೆ ಏರಿಯಾಕ್ಕೆ ಸಂಬಂಧಪಟ್ಟದ್ದು.

MR. DEPUTY SPEAKER.— The scope already laid down, cannot be enlarged.

ಶ್ರೀ ಕೋಣಂದೂರು ಲಿಂಗಪ್ಪ.— ಸರ್ಕಾರ ಯಾವ ಕಾರಣದಿಂದ ಸೊಂಡೂರಿನ ದೇವಸ್ಥಾನದ ಇನಾಂನ್ನು ರದ್ದು ಮಾಡುವುದಕ್ಕೆ ಕಾನೂನನ್ನು ಅಳವಡಿಸಿಲ್ಲ ಎಂದು ನಾನು ಕೇಳುತ್ತಿರುವುದು. ಅಲ್ಲಿ ಕುಮಾರಸ್ವಾಮಿ ದೇವಸ್ಥಾನಕ್ಕೆ ಸುಮಾರು ೮ ಸಾವಿರ ಎಕರೆ ಜಮೀನು ಇದೆ.

MR. DEPUTY SPEAKER.— These Bellary and Sandur talukas were never in the Bombay areas, at any time.

ಶ್ರೀ ಜಿ. ವಿ. ಕಕ್ಕಿಲ್ಲಾಯ.— ಮದ್ರಾಸು ಪ್ರದೇಶಗಳಿಗೆ ಮತ್ತು ಬಳ್ಳಾರಿ ಏರಿಯಾಕ್ಕೆ ಬೇರೆ ಒಂದು ಕಾನೂನು ತರುತ್ತೇವೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ.

MR. DEPUTY SPEAKER.—Once in a way I can allow the Hon. Member to make a passing remark about that matter. But I can't allow him to go on repeating the same thing.

ಶ್ರೀ ಕೋಣಂದೂರು ಲಿಂಗಪ್ಪ.— ನಾನು ಸರ್ಕಾರ ಏನು ಮಾಡಬೇಕಾಗಿತ್ತೋ ಅದನ್ನು ಏಕೆ ಮಾಡಿಲ್ಲವೆಂಬುದನ್ನು ಕೇಳುತ್ತಿದ್ದೇನೆ.

MR. DEPUTY SPEAKER.— If he persist in speaking the same thing again and again, I will have to call upon the next Hon. Member to speak.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.— ನಮ್ಮ ಸಮಾಜವಾದಿ ಮಿತ್ರರು ಸೊಂಡೂರಿನಲ್ಲಿ ಚಳುವಳಿ ಮಾಡಿ ಬಂದಿದ್ದಾರೆ. ಈಗಲಾದರೂ ಅದರ ಬಗ್ಗೆ ಮಾತನಾಡೋಣ ಎಂದು ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.— ನಿಮ್ಮಂತಹ ಜಮೀನ್ದಾರರು ಬರಲಿ ನಾವು ನೋಡಿಕೊಳ್ಳುತ್ತೇವೆ. ನಮಗೆ ಒಬ್ಬ ವ್ಯಕ್ತಿಯ ಬಗ್ಗೆ ಏನೂ ದ್ವೇಷವಿಲ್ಲ. ಅರ್ಥಮಂತ್ರಿಯವರ ಬಗ್ಗೆ ನಮಗೆ ಮೆಚ್ಚುಗೆ ಇದೆ. ಆದರೆ ಅವರ ಆಚಾರದ ಬಗ್ಗೆ ನಾವು ಕೇಳುತ್ತಿರುವುದು.

ನಮ್ಮ ಸರ್ಕಾರದವರು ಇದೇ ಮಸೂದೆಯ ಜೊತೆಯಲ್ಲಿ ಇಡೀ ರಾಜ್ಯದಲ್ಲಿರತಕ್ಕ ಇತರೇ ಇನಾಂಗಳ ದೇವಾಲಯಗಳ ಹಾಗೂ ಧರ್ಮಾದಾಯಗಳ ಬಿಲ್‌ಗಳೂ ಏನು ಇವೆ ಅವನ್ನು ಸಹ ಸೇರಿಸಿ ಇಲ್ಲಿ ತರುವುದಕ್ಕೆ ಸಾಧ್ಯವಿತ್ತು ಅದನ್ನು ಮಾಡಲಿಲ್ಲಾ. ಇದರಲ್ಲಿ ಸರ್ಕಾರ ಲೋಪವನ್ನು ಮಾಡಿದೆ.

MR DEPUTY SPEAKER — Does the Hon Member restrict himself to the scope of the Bill?

SRI KONANDUR LINGAPPA—Yes, Sir

MR. DEPUTY SPEAKER.— The Hon Member has repeated the same five time. I do not know in what country this sort of parliamentary procedure is adopted, Atleast let this be the last time

ಶ್ರೀ ಕಾಗೋಡು ತಿಮ್ಮಪ್ಪ.— ಬಹುಶಃ ಹೆಚುಕಡಿಮೆ ಅನೇಕಸದಸ್ಯರು ಈ ಸದನದಲ್ಲಿ ಪ್ರಥಮ ಬಾರಿ ಪ್ರವೇಶಮಾಡಿರಬಹುದು. ಆದ್ದರಿಂದ ನಾವು ಈ ಸದನದ ಗೌರವವನ್ನು ಕಾಪಾಡುವ ಬಗ್ಗೆ ಹೆಚ್ಚಿಗೆ ಲಕ್ಷ್ಯ ಕೊಟ್ಟಿದ್ದೇವೆ. ನಾವೇನೂ ಹತೋಟಿ ಮೀರಿ ಹೋಗಿಲ್ಲ. ಅದಕ್ಕಾಗಿ ನಮ್ಮ ಮೇಲೆ ಗೂಬೆ ಕೂಡಿಸುವುದು ಸರಿಯಲ್ಲ.

MR DEPUTY SPEAKER.— Both the Hon. Membars are lawyers and can understand the rules of procedure.

SRI S. M. SHEERANALY CHANDRASHEKHAR — Hon Membtr Sri godu Thimmappa is one of the members of the Select Committee He himself is advocating a deviation now It is permited

ಉಪ-ಸಭಾಪತಿಯವರು.— ನಾನು ಮೊದಲೇ ಹೇಳಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.— ನಾನು ಯಾವ ವ್ಯಕ್ತಿಯ ಬಗ್ಗೆ ಹೇಳುವುದಿಲ್ಲ. ಈಗ ಏಕೀಕರಣವಾಗಿದೆ. ಸ್ವತಂತ್ರ ರಾಷ್ಟ್ರವಾಗುವುದಕ್ಕೆ ಮುಂದೆ ಹಿಂದಿನ ಕಾಲದಲ್ಲಿ ಯಾವ ರಾಜಮಹಾರಾಜರುಗಳಿಗೆ ಏನೊಂದು ಸೌಲಭ್ಯಗಳನ್ನು ಕೊಟ್ಟಿದರೋ ಅವುಗಳನ್ನು ಈಗ ತೆಗೆದುಹಾಕಿದ್ದಾರೆ.

* * *

MR DEPUTY SPEAKER – I have told so many times that Shandur Inam lands does not come under the scope of this Bill

---

*** † Matter expunged as ordered by the chair.

ಶ್ರೀ ಕೋಣಂದೂರು ಲಿಂಗಪ್ಪ — ಇವತ್ತು ಈ ಬಿಲ್ಲಿನ ಜೊತೆಯಲ್ಲಿ ಅದನ್ನು ಸಹ ತರಬಹುದಾಗಿತ್ತು. ಅದನ್ನು ಏಕೆ ತರಲಿಲ್ಲವೆಂದು ಈ ಸರ್ಕಾರದ ಮೇಲೆ ಆರೋಪಣೆಯನ್ನು ಹೊರಿಸುವುದಕ್ಕೆ ನಾನು ಅಪೇಕ್ಷಮಾಡುತ್ತೇನೆ.

SRI A SHANKARA ALVA - Sir, the scope is restricted I can understand the Hon. Member making a passing reference

MR DEPUTY SPEAKER -The observations of the Hon Member Sri Konandur Lingappa with regard to Sandur Inam land stand expunged

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.- ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಅರ್ಥ ಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ ಮಾತನಾಡುತ್ತಿದ್ದಾರೆ. ಅವರಿಗೆ ಉತ್ತರ ಕೊಡುವುದಕ್ಕೆ ಮಾನ್ಯ ಹಣಕಾಸಿನ ಸಚಿವರು ಇಲ್ಲಿ ಇಲ್ಲ.

SRI A A DESAI- Is it within the purview of the Bill?

ಶ್ರೀ ಕೋಣಂದೂರು ಲಿಂಗಪ್ಪ.— ಇವತ್ತು ಈ ವಿಧೇಯಕವನ್ನು ನಮ್ಮ ಮುಂದೆ ಮಂಡನೆ ಮಾಡಿದ್ದರೂ ಇಂತಹ ಸಂದರ್ಭದಲ್ಲಿ ಇವತ್ತು ಕೂಡ ಸಮಾಜವಾದದ ಹೆಸರನ್ನು ಹೇಳತಕ್ಕ ಸರ್ಕಾರ ಇನ್ನೂ ಕೂಡ ಪಟ್ಟಭದ್ರ ಹಿತಗಳ ಸಂರಕ್ಷಣೆಯನ್ನು ಮಾಡುತ್ತಿದ್ದಾರೆಂಬ ಬಗ್ಗೆ ನಾನು ಅತ್ಯಂತ ಖೇದವನ್ನು ವ್ಯಕ್ತಪಡಿಸುತ್ತಿದೇನೆ. ಇವತ್ತು ಈ ರೀತಿ ಸಂಡೂರಿನಲ್ಲಿರಬಹುದು. ನಾಳೆ ಮತ್ತೊಂದು ಕಡೆ ಬರಬಹುದು. ಸಂಸ್ಥಾನದಲ್ಲಿ ಮೊದಲನೆಯದಾಗಿ ರಾಜಧನವನ್ನು ರದ್ದುಮಾಡಿ ಪ್ರಗತಿಪರ ಹೆಜ್ಜೆಯನ್ನು ಇಟ್ಟಿದ್ದಾರೆ. ಎರಡನೆಯದಾಗಿ ಬ್ಯಾಂಕ್ ರಾಷ್ಟ್ರೀಕರಣಮಾಡಿದ್ದಾರೆ. ಮೂರನೆಯದಾಗಿ ಸಂಡೂರಿನ ಇನಾಂಗಳಿಗೆ ಜೀವದಾನ ಕೊಟ್ಟಿದ್ದಾರೆ. ಇವುಗಳ ಬಗ್ಗೆ ಇನ್ನೂ ಮೂರು ವಿಧೇಯಕಗಳು ಬರಬೇಕಾಗಿವೆ.

MR DEPUTY SPEAKER - From my humble experience I might say in a parliamentary democracy what is most essential is a sense of proportion and a sense of value. It pains me to hurt any Hon Member But I will not hesitate to take the strictest possible decision because parliamentary democracy also violate and pursue the same thing why not the Hon. Member adopt the attitude of undrestanding?

ಶ್ರೀ ಕೋಣಂದೂರು ಲಿಂಗಪ್ಪ.— ತಮ್ಮ ಒಂದು ಔದಾರ್ಯದ ಬಗ್ಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ತಮಗೆ ಋಣಿಯಾಗಿದ್ದೇನೆ.

MR. DEPUTY SPEAKER.— The Houble Member will be judged by the proceedings· There are occasions when the Hon Member can raise this matter· He can raise it by way of a Non official Resolution, a private Member Bill or a Calling Attention Notice. The Hon Member want to introduce something which is not within the scope of this Bill The Hon Member should have understood it by now.

4–00 P.M·

ಶ್ರೀ ಕೋಣಂದೂರು ಲಿಂಗಪ್ಪ.— ಈಗ ಈ ಮಸೂದೆಯಲ್ಲಿ ಏನೊಂದು ಪರಿಹಾರ ಕೊಡಬೇಕೆಂದು ಹೇಳಿದ್ದಾರೆ ಇದಕ್ಕೂ ಆ ಭೂಸುಧಾರಣೆ ಕಾನೂನಿನಲ್ಲಿ ಹೇಳಿರುವುದಕ್ಕೂ ಬಹಳ ವ್ಯತ್ಯಾಸವಿದೆ. ಯಾರೋ ಒಬ್ಬ ದೊಡ್ಡ ಜಮೀನ್ದಾರನಿಗೆ ಒಬ್ಬ ಮಾಜೀ ಮಹಾರಾಜನಿಗೆ ಇತ್ತಲಾಗಿ ಗೇಣಿಯನ್ನೂ ಪಡೆಯುತ್ತ— ಅತ್ತಲಾಗಿ ಸರ್ಕಾರದವರಿಂದ ೩೬ ಸಾವಿರ ರೂಪಾಯಿಗಳನ್ನು ಪೂಜೆಗೆಂದು ಪರಿಹಾರ ಪಡೆದು ಬೊಜ್ಜು ಬೆಳೆಸಿಕೊಂಡಿರತಕ್ಕಂಥ ವ್ಯಕ್ತಿಗಳಿಗೆ ಈ ಮಸೂದೆಯಲ್ಲಿ ರಕ್ಷಣೆ ಇದೆ. ಈ ಮಸೂದೆಯಲ್ಲಿ ಯಾರು ಹಿಂದಿನಿಂದಲೂ ಪರಂಪರೆಯಿಂದಲೂ ಜನರನ್ನು ಶೋಷಣೆ ಮಾಡುತ್ತಾ ಇದ್ದವರು, ರಾಜ ಮಹಾರಾಜರ

ಗಳಾಗಿದ್ದು ಇಂದು ಮಾಜಿ ಮಹಾರಾಜರುಗಳಾಗಿರತಕ್ಕವರುಗಳು, ಯಾರು ಗೂಂಡಾಗಿರಿಯಿಂದ ಜೀವನ ನಡಸುತ್ತಿದ್ದರೋ ಅಂಥವರಿಗೆ ಯಾರು ಇಲ್ಲಿನವರೆಗೂ ಮಣ್ಣಿನ ಮಕ್ಕಳನ್ನು ಪಾತಾಳಕ್ಕೆ ತುಳಿದು ಅವರನ್ನು ಶೋಷಣೆ ಮಾಡಿ ಜೀವಿಸುತ್ತಿದ್ದರೋ ಅಂಥವರಿಗೆ ಇದರಲ್ಲಿ ರಕ್ಷಣೆ ಇದೆ, ಅವರಿಗೆ ಪರಿಹಾರ ಕೊಡಬೇಕೆಂದಿದೆ. ಅವರ ಹಿತಸಂರಕ್ಷಣೆ ಇದರಲ್ಲಿ ಅಡಗಿದೆ. ಇದರಲ್ಲಿ ಅಂಥಾ ದೊಡ್ಡ ಜಮೀನ್ದಾರರಿಗೆ ಮಾತ್ರವೇ ರಕ್ಷಣೆ ಇದೆ.

ಉಪಾಧ್ಯಕ್ಷರು.— ತಾವು ಈಗ ಮಾತನಾಡುತ್ತಿರುವುದು ಯಾವ ಕ್ಲಾಜಿಗೆ ಸಂಬಂಧಪಟ್ಟಿದ್ದು?

ಶ್ರೀ ಕೋಣಂದೂರು ಲಿಂಗಪ್ಪ.— ನಾನು ಈ ವಿಧೇಯಕವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಆದರೆ ಇದರಲ್ಲಿ ಈ ದೊಡ್ಡ ದೊಡ್ಡ ಜಮೀನ್ದಾರರಿಗೆ ಮಾಜಿ ರಾಜರುಗಳಿಗೆ ಜನರನ್ನು ಶೋಷಣೆ ಮಾಡಿ ಜೀವನ ನಡೆಸುತ್ತಿದ್ದ ವ್ಯಕ್ತಿಗಳಿಗೆ ನೂರಕ್ಕೆ ನೂರು ಪಟ್ಟು ಪರಿಹಾರಧನ ಕೊಡಬೇಕೆಂದು ಏನು ಹೇಳಿದ್ದಾರೆ ಅದರ ಬಗ್ಗೆ ಹೇಳುತ್ತಿದ್ದೇನೆ. ಆದರೆ ಇದೇ ಸಂದರ್ಭದಲ್ಲಿ ನಾನು ಇನ್ನೊಂದು ಪ್ರಶ್ನೆಯನ್ನು ಸರ್ಕಾರದವರಿಗೆ ಹಾಕಬೇಕಾಗಿದೆ ಸಂಡೂರಿನ ಮಹಾರಾಜರ ಇನಾಂತಿರದ್ದು ಮಾಡತಕ್ಕ ವಿಷಯವನ್ನು ಇದರಲ್ಲಿ ಏಕೆ ಸೇರಿಸಲಿಲ್ಲಾ ಎಂದು ಕೇಳುತ್ತೇನೆ. ಭೂಸುಧಾರಣೆಯ ಕಾನೂನಿಗೆ ಯಾವುದು ಮೂಲಭೂತವಾದದೊ ಅದನ್ನೇ ಇದರಲ್ಲಿ ಕೈಬಿಟ್ಟಿದ್ದಾರೆ ನಾವು ಈ ದಿವಸ ಉಳುವವನೆ ಹೊಲದೊಡೆಯ ಎಂಬ ತತ್ವಕ್ಕೆ ಶರಣಾಗಿದ್ದರೂ ಇನ್ನೂ ಇಲ್ಲಿ ರಾಜ ಮಹಾರಾಜರಿಗೆ ಇದನ್ನು ಉಳಿಸುವುದಕ್ಕೇನು ಕಾರಣ? ಇಡೀಕ್ಕೆಲ್ಲಾ ಅಳವಡಿಸತಕ್ಕಂಥ ಒಂದು ಸಮಗ್ರ ಮಸೂದೆಯನ್ನು ತರದೆ ತುಂಡು ತುಂಡು ಪ್ರದೇಶಗಳಿಗೆ ಅನ್ವಯತಕ್ಕ ಈ ಮಸೂದೆಯನ್ನು ತಂದುದು ಸರಿಯಲ್ಲ ಎಂದ ಹೇಳುತ್ತಿದ್ದೇನೆ. ಪರದೇಶಗಳಿಗೆ ಹೋಗಿ ಅಲ್ಲಿ ಓದಿಕೊಂಡು ಒಂದು ಇಲ್ಲ ಸಮಾಜವಾದ ಜಾರಿಗೆ ತರುತ್ತೇನೆಂದು ಬಾಯಲ್ಲಿ ಹೇಳಿಕೊಂಡು ವಾದ ಮಾಡುವುದು ಸೋಷಿಯಲಿಜಂ ಆದರೆ ಆಚಾರದಲ್ಲಿ ನಡೆಸುತ್ತಿರುವುದು ಮಹಾರಾಜರ ಸೋಷಿಯಲಿಜ್ ಆದರೆ ಇವೆರಡಕ್ಕೂ ಹೊಂದಾವಣೆಕೆಯಾಗುವುದಿಲ್ಲ ಎಂದು ಸಾರಿ ಸಾರಿ ಹೇಳುತ್ತೇನೆ. ಸರ್ಕಾರದವರು ಈ ದಿವಸ ಈ ಬಿಲ್ಲನ್ನು ಇಲ್ಲಿಯತನಕ ಯಾವ ಮಣ್ಣಿನ ಮಗ ಮಣ್ಣಿನಲ್ಲಿ ಬಿದ್ದು ಒದ್ದಾಡುತ್ತಿದ್ದಾನೆ ಅಂಥವನನ್ನು ಕಷ್ಟದಿಂದ ಪಾರುಮಾಡತಕ್ಕ ಮಸೂದೆಯನ್ನು ತರಬೇಕಾಗಿತ್ತು. ಅದನ್ನು ತರಲಿಲ್ಲವಲ್ಲಾ ಎಂದು ಇಷ್ಟೆಲ್ಲವನ್ನೂ ಹೇಳಬೇಕಾಯಿತು.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಸದಸ್ಯರು ಈ ಮಸೂದೆ ಯಾವ ಏರಿಯಾಕ್ಕೂ ಅನ್ವಯಿಸುವುದಿಲ್ಲ ಇದನ್ನು ಕೈ ಬಿಟ್ಟು ಪ್ರತ್ಯೇಕವಾದ ಇನ್ನೊಂದು ಬಿಲ್ಲನ್ನು ತರಬೇಕೆಂದು ಹೇಳಿದ್ದರೆ ಸಾಕಾಗಿತ್ತು, ಅದನ್ನು ಮಾಡದೆ ಅವರು ರಾಜ ಮಹಾರಾಜರ ಚರಿತ್ರೆಯನ್ನೆಲ್ಲಾ ಹೇಳುವುದಕ್ಕೆ ಹೊರಟಿರತಕ್ಕದ್ದು ಅವರ ದರ್ಪದ ಬಗ್ಗೆ ಅವರ ಹಿಂದಿನ ಆಡಳಿತದ ಬಗ್ಗೆ ಹೇಳುತ್ತಿರುವುದೆಲ್ಲಾ ಇಲ್ಲಿ ಅಪ್ರಕೃತ ಎಂದು ಅವರಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ

ಉಪಾಧ್ಯಕ್ಷರು:— ಅದನ್ನೇ ನಾನು ಐದಾರಾವರ್ತಿ ಹೇಳಿದೆ. ಆದಾಗ್ಯೂ ಅವರು ಕೇಳಲಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.— ದೇವರ ಹೆಸರಿನಲ್ಲಿ ಧರ್ಮದ ಹೆಸರಿನಲ್ಲಿ ಈ ರಾಜಮಹಾ ರಾಜರುಗಳು ಮಾನವ ಹೃದಯಕ್ಕೆ ಅರಿವಾಗತಕ್ಕ ದೀನರ ಗೋಳನ್ನು ಕೇಳದೆ ಧಿಕ್ಕರಿಸಿ ನರಹಿಂಸೆ ಮಾಡುತ್ತಾ ಮಣ್ಣಿನಲ್ಲಿ ಬಿದ್ದು ಹೊರಳಾಡತಕ್ಕ ಆ ಮೂಕ ಪ್ರಾಣಿಗಳನ್ನು ಈ ನರಭಕ್ಷಕರ ವೇದನೆಯಿಂದ ತಪ್ಪಿಸತಕ್ಕಂಥ ಒಂದು ಮಸೂದೆಯನ್ನು ಸರ್ಕಾರದವರು ತರಲಿಲ್ಲವಲ್ಲ ಎಂಬ ಖೇದದಿಂದ ನಾನು ಇದನ್ನು ಹೇಳುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ನಾನು ಹೇಳುತ್ತಿರುವುದು ಮಾನ್ಯ ಸದಸ್ಯರು ಹೇಳುತ್ತಿರುವುದು ಬಹಳ ಪ್ರಾಸಂಬದ್ಧವಾಗಿದೆ. ಶ್ರುತಿಬದ್ಧವಾಗಿದೆ. ಎಲ್ಲವೂ ಸರಿ. ಆದರೆ ಪ್ರಕೃತ ಸಂದರ್ಭಕ್ಕೆ ಇಷ್ಟೆಲ್ಲಾ ಹೇಳುವುದು ಅಪ್ರಕೃತ ಎಂದು ಹೇಳದೆ ವಿಧಿಯಿಲ್ಲ

ಉಪಾಧ್ಯಕ್ಷರು.— ಎಲ್ಲಾ ಇದೆ ಕಂಸ ಮಾತ್ರ ಇಲ್ಲ, ಯಾವುದು ಇರಬೇಕೋ ಅದೇ ಇಲ್ಲ ಬಾಕಿ ಎಲ್ಲವೂ ಇದೆ, ಆದರೆ ಅದು ಅವರ ತಲೇಲಿ ಇರಬಹುದು, ಆದರೆ ನನ್ನ ತಲೆಯಲ್ಲಿ ಮಾತ್ರ ಇಲ್ಲ,

ಶ್ರೀ ಕೋಣಂದೂರು ಲಿಂಗಪ್ಪ.— ಮಾನ್ಯ ಸಂಡೂರು ರಾಜರು ಮಾನ್ಯ ರೆವಿನ್ಯೂ ಸಚಿವರಿಗೆ ಅಪ್ತರಿರಬಹುದು, ಆದರೆ ಅವರನ್ನು ಏಕೆ ಈ ಮಸೂದೆಯಲ್ಲಿ ಇವರು ಸೇರಿಸಲಿಲ್ಲಾ? ಸರ್ಕಾರದವರು ಈ ಅಧಿವೇಶನ ಮುಕ್ತಾಯವಾಗುವುದರೊಳಗೇ ಇಡೀ ರಾಜ್ಯಕ್ಕೆ ಅನ್ವಯವಾಗುವಂಥ ಒಂದು ಸಮಗ್ರವಾದ ಮಸೂದೆಯನ್ನು ಜಾರಿದಿದ್ದರೆ ನಮ್ಮ ಪಕ್ಷದವರು ಈ ಧರ್ಮದತ್ತಿ, ದಾನದತ್ತಿ, ಜಹಗೀರು ಮತ್ತು ಇನಾಂತಿಗಳ ರದ್ದಿಯಾತಿನ ಬಗ್ಗೆ ಅವು ಎಲ್ಲೆಲ್ಲಿ ಇವೆಯೋ ಅಲ್ಲೆಲ್ಲಾ ನಾವು ಹೋರಾಟ, ಸಂಗ್ರಾಮಸಪಂತಿ

(ಶ್ರೀ ಕೋಣಂದೂರು ಲಿಂಗಪ್ಪ)

ಸಹಾ ಮಾಡಿದ್ದೇವೆ, ಅಲ್ಲದೆ ದೊಡ್ಡ ಚಳವಳಿ ಇತ್ಯಾದಿಗಳನ್ನೆಲ್ಲಾ ನಡೆಸುತ್ತೇವೆಂದು ಸರ್ಕಾರಕ್ಕೆ ಮೊದಲೇ ಒಂದು ಎಚ್ಚರಿಕೆ ಕೊಡುತ್ತಾ. ಉದಾಹರಣೆಗೆ ಸಾಗರದ ಇನಾಂ ರದ್ದಿಯಾತಿ ಬಗ್ಗೆ ಅಲ್ಲಿ ಉಳುವವನೆ ಹೊಲದೊಡೆಯ ಎಂಬ ತತ್ವಕ್ಕನುಸಾರವಾಗಿ ಅದನ್ನು ಜಾರಿಗೆ ತರುವ ಉದ್ದೇಶಕ್ಕಾಗಿ ಅಲ್ಲಿ ಹೋರಾಟ ಮಾಡುತ್ತೇವೆಂದು ಸಾರಿ ಸಾರಿ ಹೇಳುತ್ತಿದ್ದೇನೆ ಆದರೆ ನಾವು ಯಾವ ರಾಜರ ಗೂಂಡಾಗಿರಿಗೂ ಹೆದರ ತಕ್ಕವರಲ್ಲ, ನಾವು ಏನೇ ಬರಲಿ ಸತ್ಯಾಗ್ರಹ ಮಾಡೆ ಮಾಡುತ್ತೇವೆ ಎಂಬ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಡ ಬಯಸುತ್ತೇನೆ ಮತ್ತು ನಾನು ಇದನ್ನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀ ಎಚ್. ಬಿ. ಕೆಂಜೇಗೌಡ (ಕೃಷ್ಣರಾಜನಗರ).—ಉಪಾಧ್ಯಕ್ಷರೇ, ನಮ್ಮ ಮಾನ್ಯ ಕಂದಾಯ ಮಂತ್ರಿಗಳು ತಂದಿರುವ ಬೊಂಬಾಯಿ ಮತ್ತು ಹೈದರಾಬಾದ್ ಪ್ರದೇಶಗಳ ಇನಾಂ ರದ್ದಿಯಾತಿ ಬಿಲ್ಲನು ನಾನು ಸ್ವಾಗತಿಸುತ್ತೇನೆ, ಈ ಸಂದರ್ಭದಲ್ಲಿ ಈ ವಿಧೇಯಕದ ಮೇಲೆ ಅನೇಕ ಮಾನ್ಯ ಸದಸ್ಯರು ಮಾತ ನಾಡಿದ್ದಾರೆ. ಈಗ ನಮ್ಮ ಉಪಾಧ್ಯಕ್ಷರು ಮತ್ತು ಮಾನ್ಯ ಮಂತ್ರಿಗಳು ಎಚ್ಚರಿಕೆ ಕೊಟ್ಟಹಾಗೆ ಈ ವಿಧೇ ಯಕಕ್ಕೆ ಸಂಬಾಧಪಟ್ಟಹಾಗೆ ಏನು ವಿಚಾರವಿದೆಯೋ ಅದನ್ನು ಮಾತ್ರ ಹೇಳಬೇಕೇ ವಿನಾ ಪೂರ್ವದ ಇತಿ ಹಾಸ ತೆಗೆದು ಕೊಂಡು ಇತರ ವಿಚಾರ ಹೇಳಿಕೊಂಡ ಸುಮ್ಮನೆ ಕಾಲವ್ಯಯ ಮಾಡುವುದು ಸೂಕ್ತವಲ್ಲ. ಆದುದರಿಂದ ನಾನು ಈ ವಿಧೇಯಕ್ಕೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಹೇಳುತ್ತೇನೆ. ಕ್ರಾಂತಿಕಾರಕ ವಾದ ಸಮಾಜ ಸುಧಾರಣೆ ಆಗುವಂಥ ವಿಧೇಯಕ ತರಬೇಕೆಂದು ಅನೇಕ ಮಿತ್ರರು ಹೇಳಿದರು. ಹೇಳು ವುದು ಸುಲಭ. ಭಾಷಣ ಮಾಡುವುದರಲ್ಲಿ ಯಾರೂ ಕಡಿಮೆಯಿಲ್ಲ, ಎಲ್ಲರೂ ಅಗ್ರಗಣ್ಯರು. ಆದರೆ ಕಾರ್ಯರೂಪಕ್ಕೆ ತರುವುದು ಕಷ್ಟ. ಕ್ರಾಂತಿಕಾರಕವಾದ ಈ ಬಿಲ್ಲನು ತಂದಿರುವುದನ್ನು ಎಲ್ಲರೂ ಮೆಚ್ಚುಗೆ ತ್ತಾರೆ. ಸ್ವಾತಂತ್ರ್ಯ ಬಂದಮೇಲೆ ಕ್ರಾಂತಿಕಾರಕವಾದ ಬದಲಾವಣೆಯಾಗಿದೆ, ಉಳುವವನೇ ಭೂಮಿಯ ಒಡೆಯನಾಗಬೇಕು, ಯಾರು ಸ್ವಂತ ಶ್ರಮದಿಂದ ಬೆವರು ಸುರಿಸಿ ವ್ಯವಸಾಯ ಮಾಡುವರೋ ಅವರೇ ಭೂಮಿಯ ಒಡೆಯರಾಗಬೇಕು, ಎಲ್ಲೋ ಪಟ್ಟಣಗಳಲ್ಲಿ ಕುಳಿತು ಇತರರ ಕಡೆಯಿಂದ ವ್ಯವಸಾಯ ಮಾಡಿಸಿ ಶೋಷಣೆಮಾಡುವುದನ್ನು ತಪ್ಪಿಸಬೇಕು ಎಂದು ಪ್ರಯತ್ನ ನಡೆದಿದೆ. ಈಗ ಇನಾಂದಾರಿ ಜಮೀನುಗಳನ್ನು ತಪ್ಪಿಸಬೇಕು, ದೇವಸ್ಥಾನಗಳಿಗೆ ಸೇರಿದ ಜಮೀನನ್ನು ರದ್ದುಮಾಡಬೇಕು, ಅದನ್ನು ಯಾರು ಸ್ವಂತವಾಗಿ ವ್ಯವಸಾಯ ಮಾಡುತ್ತಿದ್ದಾನೋ ಅವನಿಗೆ ಕೊಟ್ಟು ಅವನನ್ನು ಮಾಲೀಕನನ್ನಾಗಿ ಮಾಡಬೇಕು ಎಂಬ ಉದ್ದೇಶದಿಂದ ತಂದಿರುವ ವಿಧೇಯಕ ಯೋಗ್ಯವಾಗಿದೆ. ಇದು ಬಹಳ ಮುಖ್ಯವಾದುದ್ದು. ಅದರಲ್ಲೂ ಟೆನೆಂಟ್ಸ್ ಏನಿದಾರೆ ಅವರನ್ನು ನಾಲ್ಕು ಭಾಗಮಾಡಿ ಬಹಳ ಬುದ್ಧಿವಂತಿಕೆಯಿಂದ ನಮ್ಮ ಕಂದಾಯ ಮಂತ್ರಿಗಳು ವ್ಯವಸಾಯಗಾರರಾಗಿರುವುದರಿಂದ ದೂರದೃಷ್ಟಿಯಿಂದ ಈ ವಿಧೇಯಕವನ್ನು ಸರಿಯಾದ ರೀತಿ ಯಲ್ಲಿ ತಂದಿರುವರು.

ಹೀಗೆ ಹೇಳಿದರೆ ಅತಿಶಯೋಕ್ತಿಯಲ್ಲ. ಮೊದಲನೆಯದಾಗಿ ಪರ್ಮನೆಂಟ್ ಟೆನೆಂಟ್ ಪ್ರೊಟೆಕ್ಟೆಡ್ ಟೆನೆಂಟ್, ಆರ್ಡಿನರಿ ಟೆನೆಂಟ್, ಪೂಜಾರಿ ಟೆನೆಂಟ್ ಎಂದು ವಿಂಗಡಿಸಿರುವುದನ್ನು ಪ್ರಸ್ತಾಪಿಸುತ್ತಾ ನಿನ್ನೆ ಶ್ರೀ ಕಕ್ಕಿಲಾಯರವರು ಪರ್ಮನೆಂಟ್ ಟೆನೆಂಟ್ ಮಾಲೀಕನಾಗಲು ಕಂದಾಯದ ೨೦ರಷ್ಟು ಕೊಡಬೇಕು, ಪೂಜಾರಿಯು ಮಾಲೀಕನಾಗಲು ಕಂದಾಯದ ನೂರರಷ್ಟು ಕೊಡಬೇಕು ಎಂದು ಮಾಡಿರುವುದು ಸರಿಯಲ್ಲ ಎಂದು ಹೇಳಿದರು. ಆದರೆ ಬುದ್ಧಿವಂತಿಕೆಯಿಂದ ಈ ರೀತಿ ಮಾಡಿದ್ದಾರೆ. ಪರ್ಮನೆಂಟ್ ಟೆನೆಂಟ್ ಎಂದರೆ ಇನಾಂದಾರ ಯಾವಾಗಿನಿಂದ ಇದ್ದಾನೋ ಆ ದಿವಸದಿಂದ ಟೆನೆಂಟ್ ಆಗಿ ಭೂಮಿಯನ್ನು ಸಾಗುವಳಿ ಮಾಡುವವನಿದ್ದಾನೆ. ಆ ಜಮೀನೆಲ್ಲಾ ಘಡವಾಗಿದ್ದು ಹೊಲ, ಗದ್ದೆ ಅಥವ ತೋಟವನ್ನು ಒಂದೇ ಸ್ಥಿತಿ ಯಲ್ಲಿಟ್ಟಿರಲಿಲ್ಲ ಟೆನೆಂಟ ಸ್ವಂತವಾಗಿ ಜಮೀನನ್ನು ಸರಿಮಾಡಿ ಹಳ್ಳತಿಟ್ಟು ನೇರಮಾಡಿ ವ್ಯವಸಾಯಕ್ಕೆ ಲಾಯಕ್ಕು ಮಾಡಿರುತ್ತಾನೆ. ಬಹಳ ಹಿಂದಿನಿಂದ ಭೂ ಮಾಲೀಕನಾಗಿ ಸ್ವಂತವಾಗಿ ಜಮೀನಿಟ್ಟುಕೊಂಡು ಇರುವವರಿಗೆ ಹಕ್ಕು ಕೊಡಬೇಕು, ಅವರು ಪರ್ಮನೆಂಟ್ ಟೆನೆಂಟ್ ಆದ್ದರಿಂದ ಅವರನ್ನು ಅಕ್ಯುಪೆಂಟ್ ಮಾಡಲು ಖಾಯಂ ಮಾಲೀಕರನ್ನು ಮಾಡಲಿ ಅವರು ಕಂದಾಯದ ೨೦ರಷ್ಟು ಕೊಡಬೇಕೆಂದು ಹೇಳಿರು ವುದು ಸೂಕ್ತವಾಗಿದೆ. ಎರಡನೆಯದಾಗಿ ಪ್ರೊಟೆಕ್ಟೆಡ್ ಟೆನೆಂಟ್. ಆತ ಹಿಂದಿನಿಂದ ತಾನೆ ಸ್ವಂತವಾಗಿ ವ್ಯವಸಾಯ ಮಾಡಿರುವುದು. ಯಾರನ್ನೋ ಟೆನೆಂಟ್ ಮಾಡಿ ಸಬ್‌ಲೆಟ್ ಮಾಡಿ ಕೆಲವರು ಜಮೀನಿನ ಸೌಲತ್ತನ್ನು ಅನುಭವಿಸುತ್ತಿದ್ದಾರೆ, ಅಂಥವರಿಗೆ ರಿಯಾಯಿತಿ ತೋರಿಸುವುದು ತಪ್ಪು ಎಂದು ಹೇಳಿದರು. ಯಾರೋ ಯಾವಾಗಲೋ ತೊಂದರೆ ಬಂದು ಹಾಗೆ ಮಾಡಿರಬಹುದು ಒಂದೆರಡು ವರ್ಷ. ಹಿಂದಿನಿಂದಲೂ ಸ್ವಂತವಾಗಿ ಕಷ್ಟಪಟ್ಟು ಮಾಡಿರುವವರು. ಪರ್ಮನೆಂಟಾಗಿ ತಾನು ತನ್ನ ಮನೆಯವರು ಸ್ವಂತವಾಗಿ ವ್ಯವ ಸಾಯ ಮಾಡಿರುವವರು, ಅವರಿಗೆ ಹಕ್ಕ ಸಲ್ಲಬೇಕು ಎಂದು ನಾನು ಸಮರ್ಥನೆ ಮಾಡುತ್ತೇನೆ. ಪ್ರೊಟೆಕ್ಟೆಡ್ ಟೆನೆಂಟ್ ಯಾರು ೧೨ ವರ್ಷದಿಂದ ಸ್ವಂತವಾಗಿ ಸಾಗುವಳಿ ಮಾಡುತ್ತಿದ್ದಾನೋ ಅವನಿಗೆ ಹಕ್ಕು, ಅದಕ್ಕಾಗಿ

ಅವನ್ನು ಕಂದಾಯಂದ ೫೦ರಷ್ಟು ಕೊಡಬೇಕು ಎಂಬ ಸೂಚಿಸಿರುವುದು ಸೂತ್ರವಾಗಿದೆ. ಮೂರನೆಯದಾಗಿ ಆರ್ಡಿನರಿ ಟೆನೆಂಟ್ ಮತ್ತು ಪೂಜಾರಿ ಟೆನೆಂಟ್ ಇದ್ದಾರೆ. ಪೂಜಾರಿಗಳು ದೇವಸ್ಥಾನದ ಪೂಜೆ ಮಾಡಿ ಕೊಂಡು ವ್ಯವಸಾಯ ಮಾಡುವುದು ಸುಲಭವಲ್ಲ, ಸೇಕಡ ೯೧ ಮಂದಿ ಪೂಜಾರರು ಬಡವರು, ಅವರು ಜೀವನ ಮಾಡುವುದು ಕಷ್ಟ. ಪೂಜೆಮಾಡಿ ಜೀವನಮಾಡುವುದಕ್ಕೆ ಅವಕಾಶ ತಪ್ಪಿಸಿದಮೇಲೆ ಮುಂದಿನ ಜೀವನಕ್ಕೆ ತೊಂದರೆಯಾಗುವುದು ಎಂದು ರೆವೆನ್ಯೂ ಮಂತ್ರಿಗಳು ಸಹಾನುಭೂತಿಯಿಂದ ನೋಡಿದ್ದಾರೆ. ಅವರಿಗೆ ಕೊನೆಯ ಪಕ್ಷ ೩ ವರ್ಷದ ಹಿಂದಿನಿಂದ ತಾವೇ ಸ್ವಂತವಾಗಿ ಮಾಡಿದ್ದರೆ ಹಕ್ಕು ಕೊಡಬೇಕೆಂದು ಮಾಡಿರುವುದು ಸೂಕ್ತ. ಅವರು ನಾಲ್ಕಾರು ವರ್ಷದಿಂದ ಮಾಡಿರಬಹುದು.

ಅಂಥವರು ಮೂರು ಪಟ್ಟು ಕಂದಾಯದ ಪ್ರೀಮಿಯಂ ಕೊಟ್ಟು ಖಾಯಂದಾರರಾಗುವ ವಿಚಾರ ಸರಿಯಾಗಿದೆ ಎಂದು ಸಮರ್ಥನೆಮಾಡಿ ಹೇಳುತ್ತೇನೆ. ಈ ಇನಾಂದಾರಿ ಪದ್ಧತಿ ರದ್ದಿಯಾಗಿ ಭೂಮಾಲಿ ಕತ್ವ ಅವನಿಗೆ ಬಂದನಂತರ, ಅದುವರೆಗೂ ದೇವಸ್ಥಾನ ಧರ್ಮಸಂಸ್ಥೆಗಳ ಸ್ಥಿತಿ ಏನು ಆಗಬೇಕು ಎಂದು ಬಹಳ ಧೀರ್ಘವಾಗಿ ಯೋಚನೆ ಮಾಡಬೇಕು. ಇನ್ನುಮೇಲೆ ಪರ್ಮನೆಂಟ್ ಟೆನನ್ಸಿಯಾಗಲಿ, ಪ್ರೊಟೆಕ್ಟೆಡ್ ಟೆನನ್ಸಿಯಾಗಲೀ, ಆರ್ಡಿನರಿ ಟೆನನ್ಸ್ ಪೂಜಾರಿಗಳಾಗಿರಲಿ, ಅವರೆಲ್ಲರೂ ಯಾವ ಯಾವ ರೀತಿ ಟೆನೆಂಟ್ಸ್ ಆಗಿದ್ದರೂ ಹಕ್ಕುಬಾಧ್ಯತೆಗಳಿಗೆ ಒಳಗಾಗುತ್ತಾರೆ. ಸಾಮಾನ್ಯವಾಗಿ ಡೆಪ್ಯೂಟಿ ಕಮಿಷನರ್ ಅವರು ಇವ ರಿಗೆ ಹಕ್ಕುಗಳನ್ನು ಕೊಟ್ಟು ಅವರನ್ನು ವಿಚಾರಣೆಮಾಡಿ, ಅವರ ಟೆನೆನ್ಸಿ ಖಾಯ ಆಗತಕ್ಕ ಒಂದು ವಿಚಾರ ವನ್ನು ಇಲ್ಲಿ ಅಳವಡಿಸಿದ್ದಾರೆ, ಇದು ಬಹಳ ಶ್ಲಾಘನೀಯವಾದದು. ಆಕ್ಯುಪೆಂಟ್ಸ್ ಆಗಿ ರಿಜಿಸ್ಟರ್ ಮಾಡತಕ್ಕದ್ದನ್ನು ಇದರಲ್ಲಿ ಕೊಟ್ಟಿದ್ದಾರೆ, ಅದೂ ಕೂಡ ಸ್ವಾಗತಾರ್ಹವಾದದು.

ಎರಡನೆಯದಾಗಿ ಪರ್ಮನೆಂಟ್ ಟೆನೆನ್ಸಿ ಪ್ರೊಟೆಕ್ಟೆಡ್ ಟೆನೆನ್ಸಿ ಬಗ್ಗೆ ಸೀಲಿಂಗ್ ವಿಚಾರದಲ್ಲಿ ಇನ್ನೊಂದು ಸಲಹೆಯನ್ನು ಹೇಳಿದ್ದಾರೆ. ನಮ್ಮ ಭೂಸುಧಾರಣೆಯ ಕಾನೂನಿನಲ್ಲಿ ಯಾವ ಒಂದು ಸೀಲಿಂಗ್ ನ್ನು ಅನುಸರಿಸುತ್ತಾರೋ ಅದೇ ಸೀಲಿಂಗ್ ಅನ್ನು ಇವರಿಗೂ ಅನುಸರಿಸತಕ್ಕ ವಿಚಾರವನ್ನು ಮಾಡತಕ್ಕಂ ಥಾದ್ದು, ಸೆಕ್ಷನ್ ೭ರಲ್ಲಿ ಪೂಜಾರಿ, ಅರ್ಚಕ ಮತ್ತು ಆರ್ಡಿನರಿ ಟೆನೆಂಟ್ಸ್‌ಗಳು, ಕಂದಾಯದ ಮೂರು ಪಟ್ಟುಕೊಟ್ಟು ಖಾಯಂದಾರರು ಆದಮೇಲೆ ಅವರಿಗೆ ವಿಶೇಷ ತರಹದ ಸೀಲಿಂಗ್ ಅನ್ನು ಮಾಡಿದ್ದಾರೆ. ನಾಲ್ಕು ಹೆಕ್ಟೇರುಗಳ ಗದ್ದೆಯಾಗಲೀ, ತೋಟವಾಗಲಿ ಇರಬಹುದು. ೮ ಹೆಕ್ಟೇರುಗಳ ಖುಷ್ಕಿ ಜಮೀನು ಇರಬಹುದು. ಇದು ಸ್ವಾಗತಾರ್ಹವಾದ ವಿಚಾರ. ಇವರು ಪರಭಾರೆ ಮಾಡಿಕೊಂಡು ಪುನಃ ಜಮೀನು ಇಲ್ಲದ ಹಾಗೆ ಮಾಡುತ್ತಾರೆ. ಇವತ್ತು ಅನೇಕ ಜನಕ್ಕೆ ಭೂಮಿಯನ್ನು ಕೊಟ್ಟಿದ್ದಾರೆ. ಇದನ್ನು ತಪ್ಪಿಸು ವುದಕ್ಕೋಸ್ಕರ ಮುಂದೆ ಮಾರುವ ಹಕ್ಕು ಇಲ್ಲ. ವ್ಯವಸಾಯಕ್ಕೆ ಅನುಕೂಲವಾಗತಕ್ಕ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲವು ಸೊಸೈಟಿಗಳಲ್ಲಿ ಸಾಲ ಪಡೆಯುತಕ್ಕ ಅವಕಾಶಗಳನ್ನು ಕಲ್ಪಿಸಿರುವುದು ರೈತರ ದೃಷ್ಟಿಯಿಂದ ಸ್ವಾಗತಾರ್ಹವಾಗಿದೆ. ಇವರ ರೆಕಾರ್ಡ್ ಆಫ್ ರೈಟ್ಸ್ ಸಹ ಎಂಟ್ರಿಮಾಡುವುದಕ್ಕೆ ಅವಕಾಶ ಮಾಡಿದ್ದಾರೆ. ಡಿಟರ್‌ಮಿನೇಷನ್ ಆಫ್ ಅಮೌಂಟ್ ವಿಚಾರದಲ್ಲಿ ಯಾವರೀತಿ ಇವರಿಗೆ ಇನಾಂ ರದ್ದಿಯಾತಿ ಯಾದ ಮೇಲೆ ದೇವಸ್ಥಾನಕ್ಕೆ ಉಳಿಯತಕ್ಕ ಆಸ್ತಿಯಿಂದ ಸರ್ಕಾರಕ್ಕೆ ಬರತಕ್ಕ ಪ್ರೀಮಿಯಂ ಕೊಟ್ಟನಂತರ ದೇವಸ್ಥಾನವನ್ನು ನಡೆಸುವುದಕ್ಕೆ ತಸ್ದೀಕ್ ಟ್ರಸ್ಟಿ ಅಲೋಯನ್ಸ್ ಇದೆ ; ಪ್ರೀಮಿಯಂ ಮುಖಾಂತರ ಬರತಕ್ಕ ಆದಾಯ, ಕಂದಾಯದ ಮುಖಾರತಕ್ಕ ಆದಾಯ ಇದನ್ನು ಯಾವರೀತಿ ಹಂಚಬೇಕು ಎನ್ನುವ ವಿಚಾರದಲ್ಲಿ ಬಹಳ ಯೋಚನೆ ಮಾಡಬೇಕು. ಇದು ಎಲ್ಲಾ ದೇವಸ್ಥಾನ ಎಲ್ಲಾ ಧರ್ಮಸಂಸ್ಥೆಗಳಿಗೂ ಒಂದೇ ರೀತಿಯಲ್ಲಿ ಬರತಕ್ಕ ಆದಾಯವಲ್ಲ, ಅನೇಕ ರೀತಿಯಲ್ಲಿ ಆದಾಯ ಬರುತ್ತಿದೆ. ಕಾನೂನಿನಲ್ಲಿ ಅಳವಡಿಸಿದಂದೆ ತಸ್ದೀಕ್ ಅಲೋಯನ್ಸ್ ಕೊಡುವುದು ಸಾಲದು ; ಬಹಳ ಕಡಿಮೆಯಾಗುತ್ತದೆ. ಐದು ವರ್ಷಗಳಿಂದ ಆವ್ರೇಜ್ ಆದಾಯ ಇಷ್ಟು ಎಂದ ಮೇಲೆ ಪ್ರಿಮಿಯಂ ಕೊಡತಕ್ಕ ವಿಚಾರವನ್ನು ನಿಗಧಿ ಮಾಡುವಾಗ ಅನೇಕರಿಗೆ ಬಹಳ ಕಡಿಮೇಯಾಗುತ್ತದೆ.

ಶ್ರಿ ಎನ್. ಹುಚ್ಚಮಾಸ್ತಿಗೌಡ.—ತಸ್ದೀಕನ್ನು ನಿಗದಿ ಮಾಡುವ ವಿಧಾನ ಹೇಗೆ ಎಂದರೆ ಈ ಕಾನೂನು

ಜಾರಿಗೆ ಬರುವುದಕ್ಕೆ ಹಿಂದೆ ಐದು ವರ್ಷದಲ್ಲಿ, ಹರಾಜು ಮುಖಾಂತರ ಆದಾಯ ಸರಾಸರಿ ಎಷ್ಟು ಎನ್ನುವು ದನ್ನು ಲೆಕ್ಕ ಹಾಕಿಕೊಂಡು ಅಷ್ಟು ಕೊಡಬೇಕು ಎಂದು ಇದೆ. ಅದರ ವಿಷಯದಲ್ಲಿ ಮಾನ್ಯ ಕೆಂಚೆಗೌಡರು ಎಷ್ಟು ಎಂಬುದನ್ನು ಯೋಚನೆ ಮಾಡುತ್ತಾರೆಂದು ಕಾಣುತ್ತದೆ. ಈ ಸಭೆಯ ಸಲಹೆ ಹೇಗೆ ಇದೆ ಎಂದು ತಿಳಿದು ಅದನ್ನು ಬದಲಾವಣೆ ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆ. ಸಂಸ್ಥೆಗಳು ಉಳಿಯಲೇ ಬೇಕು. ಮಾನ್ಯ ಲಿಂಗಪ್ಪನವರು ಹೇಳಿದ ಹಾಗೆ ದೇವಸ್ಥಾನದ ವಿಗ್ರಹಗಳನ್ನು ಪೂರಾ ತೆಗೆದುಹಾಕಿ ಆ ರೀತಿ ಮಾಡುವುದು ಬೇಡ.

ಶ್ರೀ ಕೋಣಂದೂರು ಲಿಂಗಪ್ಪ.—ಎಕ್ಸಿಬಿಷನ್‌ನಲ್ಲಿ ಇಟ್ಟ ಹಾಗೆ ಇಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರು ಹೋಗುವಷ್ಟು ದೂರ ಇಡೀ ರಾಜ್ಯದ ಜತೆ ಹೋಗುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಜನತೆಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕಾಗಿದೆ. ಶ್ರೀಮಾನ್ ಲಿಂಗಪ್ಪನವರು ಮತ್ತು ಕಾಗೋಡು ತಿಮ್ಮಪ್ಪನವರು, ಹಾಗೂ ಕಕ್ಕಿಲ್ಲಾಯ ಅವರು, ಮತ್ತು ಇನ್ನು ಕೆಲವರು ನಮಗಿಂತ ಮುಂದೆ ಓಡಿ ಇಡೀ ರಾಷ್ಟ್ರದ, ರಾಜ್ಯದಲ್ಲಿ ಪ್ರಗತಿದಾಯಕವಾದ ಹೆಜ್ಜೆ ಹಾಕುತ್ತಾ ಇರಾವುದನ್ನು ತೋರಿಸಿಕೊಡತಕ್ಕ ಸಾಮರ್ಥ್ಯಶಾಲಿಗಳು ಇದ್ದಾರೆ. ಅವರ ತಾತ್ವಿಕ ದೃಷ್ಟಿಯನ್ನು ನಾನು ಒಪ್ಪುತ್ತೇನೆ. ಆದರೆ ಸರ್ಕಾರ ಯಾವತ್ತೂ ಆಡಳಿತ ನಡೆಸತಕ್ಕ ಪಕ್ಷ. ಸಮಾಜವನ್ನು ಜೊತೆಯಾಲ್ಲಿ ಹೊಗುವ ಸಾಮರ್ಥ್ಯ ಇದ್ದರೆ ಮಾತ್ರ ಅದು ಸರ್ಕಾರ ಅಥವಾ ಜನತಾ ಸರ್ಕಾರ ಅಂದುಕೊಳ್ಳುವುದಕ್ಕೆ ಲಾಯಕ್ ಇರುತ್ತದೆ. ಅದನ್ನು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕು, ಅಷ್ಟೇ ನನ್ನ ಸೂಚನೆ.

SRI H. B. KENCHE GOWDA.—(Lands and Buildings to Vest)—

(9) Lands and buildings to vest in Inamdar.—(1) Subject to the provisions of sub-section. (3) every Inamdar shall, with effect from and on the appointed date, be entitled to be registered as an occupant of all lands.

(2) subject to the provisions of sub section (3) every building suitated within the limits of the inam which was owned immediately before the appointed date by the Inamdar shall, with effect from and on the appointed date vest. ಎರಡೂ ಒಂದೇ ಆಗಿದೆ. ಇವೆರೆಡನ್ನೂ ಒಂದಕ್ಕೆ ಸೇರಿಸಿದರೆ ಸರಿಹೋಗಬಹುದು. ಇದು ನನ್ನ ಸಲಹೆ. ಅನಂತರ ಸೆಕ್ಷನ್ ೨೨ರಲ್ಲಿ.

(1) The State Government shall pay to the Inamdar—,

(a) in respect of the revenue year in which the notification under sub-section (4) of section 1 is published in the Official Gazette, such sum as it may, on an approximate calculation determine to be payable to the Inamdar under sub-section (1) of section 21, less the rents, is any collected before the appointed date by the inamdar from permanent tenants or protected tenants in respect of that revenue years.

(b) in respect of each subsequents revenue year, the sum determined under clauses the date for the better calculation thereof have since become available, in which case the sum to be paid shall be revised be the State Government with reference to such date.

(2) After the sum payable to the Inamdar under sub-section (1) of section 21, has been finally determined, all interim paymend made to the Inamdar sub-section (1) together with the rent, if anye, collected by the Inamdar befo e the appointed date shall be adjustnat towards the sum so determined ; and any deficiency shall be made good to the inamder by the State Government and any sexcess shall be deducted fr o m the sum payable to the Inamder by the State Government in any smbsepuent revenue year or years ಎಂದು ಇದೆ. ಇದು ಇರುವುದರಿಂದ ಮೊದಲು ಏನಾದರೂ ಟೆನೆಂಟ್‌ಗಳು ಇನಾಂ ಜಮೀನಿಗೆ ಮೊದಲು ರೆಂಟ್ ಕೊಟ್ಟುಬಿಟ್ಟಿದ್ದರೆ ಅದನ್ನು ಡಿಡಕ್ಟ್ ಮಾಡಿ, ಏನಾದರೂ ಬರತಕ್ಕದ್ದು, ಅಥವಾ ಡಿಫಿಷಿಯನ್ಸಿ ಇದ್ದರೆ ಅದನ್ನು ಮೇಕ್ ಅಫ್ ಮಾಡತಕ್ಕ ಅಧಿಕಾರ ಸರ್ಕಾರಕ್ಕೆ ಇರುವುದರಿಂದ ತಸ್ದೀಕ್ ಅಲೋಯನ್ಸ್ ಬಹಳ ಕಡಿಮೆಯಾಗ್ಯ

ತ್ತದೆ. ಎಲ್ಲಾ ದೇವಸ್ಥಾನಗಳಿಗೆ ಮತ್ತು ಧರ್ಮಸಂಸ್ಥೆಗಳಿಗೆ ಸರಿಯಾದ ರೀತಿಯಲ್ಲಿ ಹಂಚಿಕೆ ಮಾಡತಕ್ಕ ವ್ಯವಸ್ಥೆ ಸಾಧ್ಯವೆ ? ಅಚುಂಚಾವವಾಗಿ ನಡೆದುಕೊಂಡು ಬಂದಿರತಕ್ಕಂಥ ದೇವಸ್ಥಾನಗಳ ಧರ್ಮಸಂಸ್ಥೆಗಳ ಮ್ಯಾನೇಜ್‌ಮೆಂಟ್ ಕುಂದಕ ಆಗತಕ್ಕ ಸಂಶಯಬಂದು ಹೇಳುತ್ತಿದ್ದೇನೆ. ಇನ್ನುಮುಂದೆ ಇವುಗಳು ರಕ್ಷಣೆಯಾಗಿ ಸುಲಲಿತವಾಗಿ ನಡೆದುಕೊಂಡು ಬರುವುದಕ್ಕೆ ಧಕ್ಕೆ ಬರುತ್ತದೆ ಎನ್ನುವ ಸಂಶಯವನ್ನು ನಾನು ವ್ಯಕ್ತಪಡಿಸುತ್ತೇನೆ.

4 P.M.

ಎರಡನೇಯದು ಇನಾಂ ಅಬಾಲಿಷನ್ ಬಿಲ್‌ನ್ನು ಕೇವಲ ಹೈದರಾಬಾದ್ ಮತ್ತು ಬಾಂಬೆ ಏರಿಯಾದ ೭ ಡಿಸ್ಟ್ರಿಕ್ಟ್‌ಗಳಿಗೆ ಅನ್ವಯಿಸುತ್ತಿದ್ದೀರಿ, ಎಲ್ಲವನ್ನೂ ಕ್ರೋಢೀಕರಿಸಿ ಒಂದು ಬಿಲ್ಲುಮಾಡಿ ಒಂದು ರೀತಿಯಾದ ಬಿಲ್ಲನ್ನು ಎಲ್ಲಾ ಕಡೆಗೂ ತಂದು ಸರಿಸಮಾನವಾದ ಹಾಗೆ ಮಾಡಬೇಕು ಎಂದು ಸಲಹೆಯನ್ನು ಕೊಡ ಬಯಸುತ್ತೇನೆ. ಅದು ಅಲ್ಲದೆ ಕೇವಲ ಯಾರು ಭೂಮಿಯನ್ನು ಉಳುಮೆ ಮಾಡುತ್ತಾರೋ ಅವರಿಗೆ ಹಕ್ಕು ಕೊಡು ವ್ಯವಸ್ಥೆ ಈ ಕಾನೂನಿನಿಂದ ಆಗಿದೆಯೋ ಹೊರತಾಗಿ ದೇವಸ್ಥಾನಗಳಿಗೆ ಧರ್ಮ ಸಂಸ್ಥೆಗಳಿಗೆ ಬರತಕ್ಕ ಆದಾಯದ ಬಗ್ಗೆ ಮುತುವರ್ಜಿವಹಿಸಿಲ್ಲ ದೇವಸ್ಥಾನಗಳಿಗೆ ಖಾಸಗಿಯವರಿಗೆ ಅನ್ವಯಿಸತಕ್ಕ ಬಿಲ್ಲನ್ನು ತಂದು ಸಮಾಜವಾದವನ್ನು ಜಾರಿಗೆ ತರತಕ್ಕ ನೀತಿಯನ್ನು ಅಳವಡಿಸಬೇಕು ಎಂದು ಸಲಹೆ ಮಾಡಿ ಬಯಸುತ್ತೇನೆ, ಇಷ್ಟನ್ನೆಲ್ಲ ಹೇಳಿ ಈ ವಿಧೇಯಕಕ್ಕೆ ಪೂರ್ಣವಾದ ಬೆಂಬಲವನ್ನು ಕೊಟ್ಟು ಇದನ್ನು ಸ್ವಾಗತಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

SRI P. A. PAWSHE (Uchagaon) :—Mr. Speaker Sir, I welcome this Bill which has been introduced by the Hon' ble Revenue Minister in this Assembly for consideration as it is a progressive step taken by the Government to protect the interests of the tenants who are cultivating the Devasthan inam lands in the Bombay and Hyderabad Karnataka area. The tenants who are cultivating these lands since long, were not protected by any Act so far. Neither the provisions of the Bombay Tenancy and Agricultural Lands Act nor the provisions of the Bombay Land Reforms Act were not made applicable to these lands and as such the tenants who were cultivating these lands were put to various difficulties. But under the provisions of this Bill, Government has taken every bold step to protect the interests of the tenants who are cultivaing these lands. It is the intention of the Government to confer occupancy rights on such tenants, and as such I welcome this Bill and fully support it.

Now as regards the tenants in Bombay area, I would like to make some suggestions which should be taken into consideration by the Government.

In the Bombay area, as the provisions of the tenancy Act were not made applicable to those lands, in the record of rights the names of persons who were cultivating these lands as tenants were not entered. And so, under the present Act, these tenants whose names are not entered in the Record of Rights, should not be allowed to suffer merely because their names are not shown in the Record of Rights as tenants or cultivators. So the Government must see that the interests of these tenants, whose names are not entered in the Record of Rights or in the cultivators column in the Bombay area that their interests are protected and the Government should see that their names are entered in the Record of Rights before this Act is brought into force.

(SRI P. A. PAWSHE)

Secondly, with regard to Bombay area, in the Belgaum Taluk, there are certain Devasthan lands are being looked after by the Government the Thasildar is looking to the vahivat of these lands. But recently, certain this ladars taking advantage of the fact that the provisions of the tenancy act are not applicable to the lands have triedto evict cer tain tenants from these lands and these tnants who are cultivating these lands for more than 20 years, have approached the court. But in the court. they have failed to get any elief, as the court held that they could not be recognised as tenantrs under the provisions of the Tenancy Act, as the tenancy Act is not applicable to those lands. So, my submission is that the interest of these tenants whose litigation is pending in the court, must, be protected by the Government. In certain cases, where the tenants have failed to secure their rights in the courts, and where their claims are denied by civil courts, only because the provisions or the Tenancy Act does not apply to them, have been eicted from the lands protection should be given tothese tenants also as they were cultivating these lands since a long time and they were paying the rent to the concerned inamdar

I will draw the attention of the House to Chapter IV wherein provisions are made with regard to the tnants who have got a right to register themselves under section 6 of this Act. Section 28 says :

"28. Termination of tenancy .—the tenancy of any land held by a tenant shall not be terminated unless such tenant.-

(a) has done any act which is destructive or permanently injurious to the land : or

(d) has used such land for a purpose other than agriculture : ot

(e) or has sub-let the land or assigned any interest theren excep to the exteent provided in section 26. As this act intends to protect the interests of the tenants, I wish to draw the attention of the House to Section 22 of the Mysore Land Reforms Act, where similar provisions have been made to evict tenants. Under that Act, in a proviso it has been provided that six months time has to be given to the tenant to remedy the breach. It reads :

"provided that no tenant shall be evicted under this sub-section unless the land lord has given six months notice in writing informing the tenant of his decision to terminate the tenancy and mention the grounds for such termination and within that period the tenant fails to remedy the breaeh."

So, I submit that a similar provision ought to have been made under this Act also and six months time ought to have been given before the tenancy is terminated under the provision of section 28.

Under sub-section (c) of sectio 28, the provison reads :

> "provided that nothing in clause (c) shall apply to subletting of any land held by a tenant who is a widow or a minor or who is subject to physical or mental disablity."

My submission is that under this section a person who is serving in the armed forces, also should have been included. A person who is cultivating the land belonging to the Devisthana subsequently joins the armed forces and thereis no one to cultivate thes land in his family ; and he has there fore to sub-let it to some other person. Under these circumstances, his interest ought to have been protected by making provision under the Act.

So also, under section 27, the tenancies have been made heritable: Under that section, suppose a tenant dies, and his heirs, if he is serving in the armed forces and by heirship if he is entitled to cultivate the land he may not be in a position to cultivate the land personally and he will be forced to sublet it some other person. Taking inte consideration these factors, provision ought to have been made to protect the interests of the persons serving in the armed forces.

Under clause 29 the procedure for termination of tenancies is laid down. This is only a one-sided procedure and it is likely to cause great injustice to the tenants, because wide powers are given to the Assistant Commissioner. What is contimplated is that only a showcause notice should be given to the tenant and it does not contemplate any procedure to record evidence or take into consideration the case of the tenant. Under the Mysore Land Reforms Act there is a similar provision but there the onus of proof is on the landlord where as here it is not so and the sole authority will be the Assistant Commissioner, and there is no provision to give proper opportunity for the tenant to place all the evidence with him before the authority. In sub-clause (3) provision for appead is made. The usual procedure is that wherever an appeal is filled, the papers from the Lower Court are called for by the appellate court, but here only the report of the officer passing the order is to be called for and if the appeal is decided only on the report, my submission is that great harm will be caused to the tenants. So, this provision may be reconsidered and suitably amendeb so as to benefit the tenants.

Now I come to clause 43 which deals with penalties. There should have been separate specific clauses for sub-clauses (a), (b) and (c). The provisions of thir clause lot of difficulties to various. For example, take sub-clause (2) of clause 29. Under this sub-clause, if a person fails to delives possession of land as per the orders of the Assisant Commissioner, he shall be made liable for penalities provided sub-clause (a) of clanse 43. He will be unnecessarily put to harassment. Thereyore, it is not just to have such a provision in

(SRI P. A. PAWSHE)

this Bill. Supposing a person has preferred an appeal under sub-clause (3) of clause 29, then he will be held liable under clause 43 because there is nothing in the Bill which says that if an appeal is pieferred under sub-clause (3) of clause 29, he will not be liable for protection under clause 43. If he concered officer wants to play mischief he may prosecute him. under sub-clause (a) of clause 43. Therefore, this clause also needs reconsideration. with these words, I thank the chair and conclude my speech.

SRI C. M. ARUMUGHAM :—Before you call upon anothes member to speak, I want to make a representation to the Chair. The other day when you were presiding I raised a point and mentioned certain facts but then you asked me to put them in writing which I did. What is the sanctity behind it ?

MR. DEPUTY SPEAKER :—When the hon. Member raised it, it was altogether a differen viz. discussion on the Motion of Thanks to the Governor. Now we are in the midst of a Bill. How can he raise it now ?

SRI C. M. ARUMUGHAM :—You, Sir, directed me to give it in writing which I did and what is the reply from the Minister ?

MR. DEPUTY SPEAKER :—The hon. Member knows that he cannot raise it now.

SRI C. M. ARUMUGHAM :—For making a representation there are no rules.

MR. DEPURTY SPEAER ;—Every occasion cannot be converted into a zero hour,

SRI C. M. ARMUGHAM :—The Chair directed me and I have obeyed the instructions and given the letter to the Speaker.

MR. DEPUTY SPEAKER :—It ought to have been given to the minister concerned:

SRI C. M. ARMUGHAM ;— Why should I ? I have sent the letter to you. So far I have not received any acknowledgment.

MR. DEPUTY SPEAKER:— I think you had asked for certain information from the Speaker. There is no scope for the Speaker, if you make an allegation.

SRI C. M. ARUMUGHAM ;—Kindly read my letter.

MR. DEPUTY SPEAKER :—It is not here now. Please don't raise it now. not the cccsion to raise it.

SRI C. M. ARUMUGHAM :—When shall I raise it ?

MR. DEPUTY SPEAKER : – The right to raise it at an appropriate time.

SRI S. BANGARAPPA : – The Chief Minister has not come to the House though he has returned from Delhi. We have raised a privilege motion against him. I request the Chair to summon immediately the Chief Minister because we have been waiting for three days and he is not present in the House. We have waited for three days and for how many more days do you expect us to wait ?

ಶ್ರೀ ವಾಟಾಳ್ ನಾಗರಾಜ್ :—ನಾನು ಮತ್ತು ಬಂಗಾರಪ್ಪನವರು ಇಬ್ಬರೂ ಸೇರಿ ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿದ್ದೆವು. ಮುಖ್ಯ ಮಂತ್ರಿಗಳು ಮೂರು ದಿವಸಗಳಿಂದ ಉತ್ತರ ಕೊಡುವುದಕ್ಕೆ ತಯಾರು ಇಲ್ಲ. ಅವರು ಸಭೆಯನ್ನು ಬಹಳ ಲಘುವಾಗಿ ಕಾಣುತ್ತಿದ್ದಾರೆ. ಆದುದರಿಂದ ಮುಖ್ಯಮಂತ್ರಿಗಳನ್ನು ಇಲ್ಲಿಗೆ ತಕ್ಷಣ ಕರೆಯಬೇಕು.

ಶ್ರೀ ಎಚ್, ಹುಚ್ಚಮಾಸ್ತಿಗೌಡ.—ಪ್ರತಿ ದಿವಸ ೫ ಗಂಟೆಗೆ ಏನೋ ಒಂದು ದೋಷ ಇದೆ ಎಂದು ಕಾಣುತ್ತದೆ. ತಾವು ಸ್ವಲ್ಪ ಹತೋಟಿ ಇಡಬೇಕು.

ಶ್ರೀ ವಾಟಾಳ್‌ನಾಗರಾಜ್ —ಮುಖ್ಯ ಮಂತ್ರಿಗಳ ದೋಷದಿಂದ ಹಾಗಾಗಂತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :— ೫ಗಂಟೆಗೆ ರಾಹುಕಾಲಬರಂತ್ತದೆ.

MR. DEPUTY SPEAER :—We are sufficiently powerful to control all "kalas". I think no reply is necessary. These things have been repeatedly rised. If the hon. members want the Chair to summon any minister who is not presently concerned with the subject under, discussion I will not do it. I would have certainly taken the consensus if the Revenue Minister was not present here. He is ready here and the Bill which in piloted is under discussion. other hon. members areanx ous to speak. I am just like any other member. I must have good will and understanding from everybody.

SRI BANGARAPPA : – Do you like lengthy absence of ministers ?

MR DEPUTY SPEAKER :—Absence can never be lengthy. if the presence of the Ministers was required, I would have called him.

ಶ್ರೀ ವಾಟಾಳ್ ನಾಗರಾಜ್ .—ಸ್ವಾಮಿ ಅಧ್ಯಕ್ಷರೇ, ಮೂರು ದಿವಸ ಆಯಿತು ನೋಟೀಸ್ ಕೊಟ್ಟು. ಮಾನ್ಯ ಮುಖ್ಯ ಮಂತ್ರಿಗಳು ಬರುತ್ತಾರೆ ಎಂದು ಅಧ್ಯಕ್ಷರು ಹೇಳಿದರು. ಮುಖ್ಯ ಮಂತ್ರಿಗಳು ಬರಲಿ.

ಉಪಾಧ್ಯಕ್ಷರು .—ಯಾವಾಗ ನೋಟೀಸ್ ಕೊಡುವುದು ? ಯಾವಾಗ ರೈಸ್ ಮಾಡುವುದು?

ಶ್ರೀ ವಾಟಾಳ್‌ನಾಗರಾಜ್ :—ಕ್ವೊಶ್ಚನ್ ಅವರು ಆದಮೇಲೆ ಅದನ್ನು ರೈಸ್ ಮಾಡುವ ಕಾಲಕ್ಕೆ ಮುಖ್ಯಮಂತ್ರಿಗಳು ಬರಲಿ ಎಂದು ಹೇಳಿದರು. ಆದಕ್ಕೆ ನಾವು ಅವರು ಬರಲಿ ಎಂದು ಕಾದು ಕುಳಿತಿದ್ದೇವೆ. ಅವರು ಯಾಕೆ ಬಂದಿಲ್ಲ ಎಂದ. ನನಗೆ ಅರ್ಥವಾಗುತ್ತಾ ಇಲ್ಲ. ನಮ್ಮ ಅಭಿಪ್ರಾಯ ಏನಿದೆ ಎಂದರೆ ಅವರನ್ನು ಇಲ್ಲಿಗೆ ಕರೆಸಿ.

ಉಪಾಧ್ಯಕ್ಷರು.—ಅದನ್ನು ತಿಳಿಸುತ್ತೇನೆ. Have some andrestanding and restraint.

ಶ್ರೀ ವಾಟಾಳ್ ನಾಗರಾಜ್ :—ತಾವು ಕರೆಸುತ್ತೇನೆ ಎಂದು ಭರವಸೆ ಕೊಟ್ಟಮೇಲೆ ಕುಳಿತುಕೊಳ್ಳುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಉಪಸಭಾಪತಿಗಳೇ, ಸರಕಾರದವರು ಮೈಸೂರು (ಬೊಂಬಾಯಿ ಮತ್ತು ಹೈದರಾಬಾದ್ ಪ್ರಾಂತದ) ರಿಲಿಜಿಯಸ್ ಅಂಡ್ ಚಾರಿಟಬಲ್ ಇನಾಂ ರದ್ದಿ ಮಸೂದೆಯನ್ನು ತಂದಿದ್ದಾರೆ. ಇದನ್ನು ಸ್ವಾಗತಿಸುತ್ತಾ ನಾನು ಒಂದೆರಡು ಸಲಹೆಗಳನ್ನು ಸರಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಈ ದೇವಸ್ಥಾನಗಳ ಜಮೀನನ್ನು ಉಳುವವನಿಗೆ ಕೊಡಿಸಬೇಕು, ಅದನ್ನು ಅನುಭವಿಸುವವನಿಗೆ ಪೂರ್ಣ ಅಧಿಕಾರಕೊಡಬೇಕು ಎನ್ನುವುದೇ ಈ ಮಸೂದೆಯ ಮೂಲ ಉದ್ದೇಶ. ಅದಕ್ಕಿಂತ ಮುಂಚೆ ಸರಕಾರ ಒಂದು ಯೋಚನೆ ಮಾಡಬೇಕು. ಏನೆಂದರೆ ಈ ಜಮೀನಿನ ಆಸ್ತಿ ಎಲ್ಲಿಂದ ಬಂತು ? ಯಾರಿಂದ ಬಂತು ? ಯಾವ ಉದ್ದೇಶಕ್ಕೋಸ್ಕರ ದೇವಸ್ಥಾನಗಳಿಗೆ ಮುಡು ಪಾಗಿಟ್ಟಿದ್ದಾರೆ ? ಆ ಒಂದು ಕಾರ್ಯ ಎಷ್ಟುಮಟ್ಟಿಗೆ ನಡೆಯುತ್ತಿದೆ ಎಂಬುದನ್ನು ಸರಕಾರಗಮನದಲ್ಲಿ ಇಟ್ಟುಕೊಂಡು ನೋಡಬೇಕಾದುದು ಬಹಳ ಮುಖ್ಯವಾದುದು. ನಾವೆಲ್ಲರೂ ದೇವರಲ್ಲಿ ನಂಬಿಕೆಯನ್ನು ಇಟ್ಟಿರತಕ್ಕವರು, ದೇವರನ್ನು ಸಾಕ್ಷತ್ ನಿಜವಾಗಿ ನೋಡತಕ್ಕ ಶಕ್ತಿ ನಮ್ಮಲ್ಲಿ ಇಲ್ಲದೇ ಹೋದರೂ ಸಹ ಮಹಾತ್ಮ ಗಾಂಧಿಯವರ ಸಂದೇಶ ಮನುಷ್ಯನಿಗೆ ಶಾಂತಿ ಸಿಕ್ಕಬೇಕಾದರೆ ಸ್ವಲ್ಪಮಟ್ಟಿಗೆ ದೇವರಲ್ಲಿ ಪ್ರಾರ್ಥನೆ ಮಾಡಬೇಕು.

5. 00 P.M.

ನಮ್ಮ ದೇವಾಲಯಗಳು ಅನಾದಿ ಕಾಲದಿಂದಲೂ ಧರ್ಮದ ತವರೂರಾಗಿ ಬೆಳೆಯುತ್ತ ಬಂದಿವೆ. ನಮ್ಮ ಹಿರಿಯರು ಎಲ್ಲ ಜನರಿಗೂ ಧರ್ಮದ ಒಂದು ಉಪದೇಶ ಮಾಡುವುದಕ್ಕೋಸ್ಕರ ಹಾಗೂ ಜನತೆಯಲ್ಲಿ ಧಾರ್ಮಿಕ ತತ್ವವನ್ನು ಪ್ರಚಾರ ಮಾಡುವುದಕ್ಕೋಸ್ಕರ ದೇವಾಲಯಗಳನ್ನು ಕಟ್ಟಿಸಿ ದೇವರ ಪೂಜೆ ಇತ್ಯಾದಿ ಕೆಲಸಕಾರ್ಯಗಳನ್ನು ಮಾಡಲು ಆಸ್ತಿಪಾಸ್ತಿಗಳನ್ನು ಬಿಟ್ಟಿದ್ದಾರೆ ಹೀಗೆ ಕೊಟ್ಟಿರುವ ಆಸ್ತಿಗಳನ್ನು ಅಲ್ಲಿ ದೇವರ ಪೂಜೆಗಳನ್ನು ನಡೆಸುವ ಜನರು ಅನುಭವಿಸಿಕೊಂಡು ಬರತ್ತಿದ್ದಾರೆ. ಈಗ ಈ ಬಿಲ್ಲಿನ ಮೂಲಕ ಅಂತಹ ಆಸ್ತಿಗಳನ್ನು ಸರಕಾರವೇ ತೆಗೆದುಕೊಳ್ಳುವುದರಿಂದ ಇನ್ನು ಮುಂದೆ ದೇವಸ್ಥಾನಗಳ ಕೆಲಸಗಳು ಹಾಗೂ ಇನ್ನಿತರ ಕಾರ್ಯಕ್ರಮಗಳು ಕುಂಠಿತವಾಗುತ್ತದೆ ಎನ್ನುವ ಒಂದು ಅನುಮಾನವೂ ಜನರಲ್ಲಿ ಬರುತ್ತದೆ. ಇಂತಹ ಅನುಮಾನಗಳನ್ನು ಪರಿಹರಿಸಲು ಸರಕಾರ ಇದರ ಕೆಲಸಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ಇನ್ನುಮುಂದೆ ನಡೆಸಲು ಯಾವ ಕಾರ್ಯಕ್ರಮವನ್ನು ಹಾಕಿದ್ದಾರೆನ್ನುವುದು ಈ ಮಸೂದೆಯಲ್ಲಿ ಕಾಣುತ್ತಿಲ್ಲ. ಯಾವ ಕಾಲದಲ್ಲೋ ಯಾವ ಯಾವ ಮಹಾನುಭಾವರುಗಳೋ ಶ್ರಮ ಪಟ್ಟು ದೇವಸ್ಥಾನಗಳನ್ನು ಕಟ್ಟಿಸಿ ಜನರಲ್ಲಿ ಧರ್ಮದ ಜಾಗೃತಿಯನ್ನು ಉಂಟುಮಾಡಲು ಇಂತಹ ದೇವಾಲಯಗಳು ಬೆಳೆಯುತ್ತ ಬಂದಿದೆ. ಇಂದು ಅನೇಕ ಕಡೆ ಇರುವ ಹಳ್ಳಿಗಳಲ್ಲಿ ನಾವು ನೋಡಿದರೆ ನಮ್ಮ ದೇಶದಲ್ಲಿ ಎಲ್ಲ ಕಡೆಗಳಲ್ಲೂ ಒಂದೊಂದು ದೇವಸ್ಥಾನವಿದೆ ಮತ್ತು ಇದಕ್ಕೆ ತಕ್ಕ ಪುದುವಟ್ಟು ಎಂದು ಮಾಡಿ ಕೆಲವು ಆಸ್ತಿಗಳನ್ನು ಬಿಟ್ಟಿದ್ದಾರೆ. ಈ ಸಂದರ್ಭದಲ್ಲಿ ಇಂತಹ ಆಸ್ತಿಗಳನ್ನೆಲ್ಲಾ ಸರಕಾರ ವಹಿಸಿಕೊಳ್ಳುತ್ತದೆ, ನಾವು ಯಾವ ಹಳ್ಳಿಗೆ ಬೇಕಾದರೂ ಹೋಗಿ ನೋಡಿದರೆ ಆ ಊರಿನಮುಂದೆ ಒಂದು ಆಂಜನೇಯನ ದೇವಸ್ಥಾನ ಒಂದುಕಡೆ ಇರುತ್ತದೆ. ಇನ್ನೊಂದು ಕಡೆ ಗಣಪತಿ ದೇವಸ್ಥಾನ ಇರುತ್ತದೆ ಗ್ರಾಮಾಂತರ ಪ್ರದೇಶದ ಜನರು ಬೆಳಿಗ್ಗೆ ಎದ್ದು ತಕ್ಷಣ ಊರು ಮುಂದಿರುವ ಆಂಜನೇಯನ ದೇವಸ್ಥಾನಕ್ಕೆ ಹಾಗೂ ಗಣಪತಿ ದೇವಾಲಯಕ್ಕೆ ಹೋಗಿ ತಮ್ಮಲ್ಲಿರತಕ್ಕ ತಪ್ಪುಗಳನ್ನೆಲ್ಲಾ ಕ್ಷಮಿಸಿ ಎಲ್ಲರಿಗೂ ಸುಭಿಕ್ಷೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ಅನಂತರ ತಮ್ಮ ಕೆಲಸಗಳಿಗೆ ಹೋಗುತ್ತಾರೆ ಇದು ಹಿಂದಿನಿಂದ ಬಂದಿರುವ ಸಂಪ್ರದಾಯಗಳು, ಇಂದೂ ಕೂಡ ಇದು ಆಚರಣೆಯಲ್ಲಿದೆ. ಇವನ್ನೆಲ್ಲಾ ನೋಡುವಾಗ ನಮ್ಮ ಹಿರೀಕರು ಯಾವ ಒಂದು ಉದ್ದೇಶಕ್ಕಾಗಿ ಆಸ್ತಿಪಾಸ್ತಿಗಳನ್ನು ಕೊಟ್ಟು ಇಂತಹ ದೇವಾಲಯಗಳನ್ನು ಬೆಳೆಸಿಕೊಂಡು ಬರುತ್ತಿದ್ದರೋ ಅಂತಹ ದೇವಾಲಯಗಳ ಅಳಿವಿಗೆ ನಾವು ಇಲ್ಲಿ ಇಂತಹ ಒಂದು ಮಸೂದೆ ತಂದು ಒಂದು ರೀತಿಯಾದ ಬಿಕ್ಕಟ್ಟುಂಟಾಗಿದೆ ಎಂದು ನಾನಾದರೋ ಭಾವನೆ ಮಾಡುತ್ತೇನೆ.

ಇದಲ್ಲದೆ ಸರಕಾರ ಈಗಾಗಲೇ ಇನಾಂ ಅಬಾಲಿಷನ್ ಬಿಲ್ಲು ತಂದು ಅದು ಈಗಾಗಲೇ ದೇಶದಲ್ಲಿ ಜಾರಿಯಲ್ಲಿದೆ. ನಮ್ಮ ರೆವೆನ್ಯೂ ಮಂತ್ರಿಗಳಿಗೂ ಇದು ಗೊತ್ತು. ನಾವೆಲ್ಲ ನೋಡಿದ ಹಾಗೆ ಅನೇಕ ಕಡೆ ದೇವಾಲಯಗಳಿಗೆ ಕೊಟ್ಟಿರುವ ಭೂಮಿ ಅದಕ್ಕೆ ಸಂಬಂಧಪಟ್ಟವರು ಎಂದರೆ ಪೂಜೆ ಇತ್ಯಾದಿ ಕೆಲಸಗಳನ್ನು ಮಾಡಿಕೊಂಡು ಬರುತ್ತಿರುವವರಿಗೆ, ಅವರ ಹೆಸರಿನಲ್ಲಿ ದಾಖಲೆ ಕೂಡ ಇರುವುದಿಲ್ಲಾ ಅದರ ಬಗ್ಗೆ ಅರ್ಜಿ ಕೊಟ್ಟರೂ ಸರಕಾರದ ಅಧಿಕಾರಿಗಳು ಅಂತಹವರಿಗೆ ಸಹಾಯ ಮಾಡುತ್ತಿಲ್ಲ. ಹಿಂದಿನಿಂದಲೂ ಧರ್ಮದ

ಬಗ್ಗೆ ಪ್ರಚಾರ ಮಾಡೋಣ ಎಂದು ಇಂತಹ ಧಾರ್ಮಿಕ ಸಂಸ್ಥೆಗಳನ್ನು ಕಟ್ಟಿಸಿ ಧಾರ್ಮಿಕ ಸಂಸ್ಕೃತಿಯು ನ್ನುಂಟು ಮಾಡಿ ದೇವಾಲಯಗಳು ಸರಿಯಾಗಿ ನಡೆಯಬೇಕೆಂದು ಮಾಡಿದ್ದರೂ ಇಂದು ದೇವಾಲಯಗಳಲ್ಲಿ ಅನೇಕ ಕಡೆ ಸರಿಯಾದ ಪೂಜೆ ಇತ್ಯಾದಿಗಳು ನಡೆಯುತ್ತಿಲ್ಲ ಈಗ ಇಂತಹ ದೇವಾಲಯಗಳ ಭೂಮಿಯು ಪರಿಪೂರ್ಣ ಹಕ್ಕು ಸಂಬಂಧಪಟ್ಟ ಅರ್ಚಕರು ಎಂದರೆ ಪೂಜೆ ಇತ್ಯಾದಿ' ಕೆಲಸಗಳನ್ನು ನಡೆಸುವವರ ಹೆಸರಿ ನಲ್ಲಿ ಇರುವಂತೆ ಮಾಡಬೇಕು ಆ ರೀತಿಯಾಗಿ ಈ ಕಾನೂನಿನ ಪರಿಮಿತಿಯೊಳಗೆ ಮಾಡಿದರೆ ಅಂತಹ ಜನಕ್ಕೆ ಒಂದು ರೀತಿಯಾದ ರಕ್ಷಣೆ ಕೊಟ್ಟಂತಾಗುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಯೋಚನೆ ಮಾಡಿ ಇದಕ್ಕೆ ಒಂದು ಸರಿಯಾದ ದಾರಿ ಮಾಡಬೇಕೆಂದು ಅವರಲ್ಲಿ ಕೇಳುತ್ತೇನೆ. ನನ್ನ ಅಭಿಪ್ರಾಯದಲ್ಲಿ ಇದುವರೆಗೂ ದೇವಾಲಯಗಳ ಕೆಲಸ ಕಾರ್ಯಗಳನ್ನು ಮಾಡುವವರಿಗೇ ಇವನ್ನು ಲೀಸು ಮಾಡಿ ಕೊಟ್ಟರೆ ಸ್ವಲ್ಪ ಇಲ್ಲಿನ ಜನಕ್ಕೆ ಅನುಕೂಲವಾಗುತ್ತದೆ ಎಂದು ನನ್ನ ಭಾವನೆ. ಇದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ಉದಾಹರಣೆ ಯಾಗಿ ನಮ್ಮ ತಾಲ್ಲೂಕನ್ನೇ ತೆಗೆದುಕೊಂಡರೆ ನಮ್ಮ ಊರಿನಲ್ಲಿರುವ ಒಂದು ದೇವಾಲಯದ ಅರ್ಚಕರಿಗೆ ಸ್ವಲ್ಪ ಭೂಮಿ ಇತ್ತು. ಇದನ್ನು ಅವರು ಸುಮಾರು ಮೂವತ್ತು ವರ್ಷಗಳಿಂದಲೂ ಅನುಭವಿಸಿಕೊಂಡು ಬರುತ್ತಿದ್ದರು. ಇಂದು ಇವರ ಪೂರ್ವಿಕರ ಹೆಸರಿನಲ್ಲಿದ್ದ ದಾಖಲೆಯನ್ನು ತಮ್ಮ ಹೆಸರಿಗೆ ಪಹಣಿಯಲ್ಲಿ ಬರೆಯಬೇಕೆಂದು ಅರ್ಜಿ ಕೊಟ್ಟು ಕೇಳುತ್ತಿದ್ದರೂ ಇದುವರೆಗೆ ಸರಕಾರ ಆ ಅರ್ಚಕರ ಹೆಸರಿನಲ್ಲಿ ಪಹಣಿ ಬರೆಯುವ ಕರ್ತವ್ಯ ಲೋಪ ಮಾಡಿದ್ದಾರೆ. ಅವರ ತಾತನ ಕಾಲದಿಂದಲೂ ಇದೇ ಪರಂಪರೆಗೆ ಅವರು ಸೇರಿದವರಾಗಿದ್ದರೂ ಇವರ ಹೆಸರನ್ನು ಇದುವರೆಗೆ ಪಹಣಿಯಲ್ಲಿ ಬದಲಾವಣೆ ಮಾಡಿ ಬರೆಯಲಿಲ್ಲ. ಇಲ್ಲಿನ ಅಧಿಕಾರಿಗಳು ಇರುವ ಪಹಣಿಯನ್ನು ಬೇರೆ ರೀತಿ ತಿದ್ದಿ ಯಾವುದೋ ನಿಯಮದ ಪ್ರಕಾರ ಈ ಅರ್ಚಕರಿಗೆ ಬರುವ ಜಮೀನು ಬರುವುದು ಎರಡುವರೆ ಎಕರೆ ಬರೆದು ತಹಶೀಲುದಾರರಬಳಿ ಇರುವ ರಿಕಾರ್ಡುಗಳನ್ನು ಕೂಡ ತಿದ್ದಿದ್ದಾರೆ. ಇದರಿಂದಾಗಿ ಇಂದು ಇವರು ಅನ್ನವಿಲ್ಲದೆ ಕಷ್ಟಪಡುವಹಾಗೆ ಮಾಡಿದ್ದಾರೆ. ಯಾವಾ ಗಲೂ ಕಾನೂನು ಮಾಡುವಾಗ ಆ ಕಾನೂನಿನ ಕೆಳಗಡೆ ಬರತಕ್ಕ ಜನಕ್ಕೆ ಸರಿಯಾದ ರೀತಿಯಲ್ಲಿ ರಕ್ಷಣೆ ಸಿಗುವ ಹಾಗೆ ವ್ಯವಸ್ಥೆ ಮಾಡದೇ ಹೋದರೆ ಅಂತಹ ಕಾನೂನುಗಳಿದ್ದು ಪ್ರಯೋಜನವೇನು ? ಎಲ್ಲರಿಗೂ ಸರಿಯಾದ ರೀತಿಯಲ್ಲಿ ರಕ್ಷಣೆ ಸಿಗಬೇಕು. ಯಾರು ಪ್ರಭಾವವುಳ್ಳವರಾಗುತ್ತಾರೋ ಅಂತಹವರಿಂದ ಬಡ ಜನತೆಗೆ ಅನ್ಯಾಯಗಳಾಗಿ ಸರಿಯಾದ ರಕ್ಷಣೆ ಸಿಗದಂತೆ ಮಾಡುತ್ತಿದ್ದಾರೆ ನಮ್ಮ ತಾಲ್ಲೂಕಿಗೆ ಸೇರಿದ ಆಲಗೂರು ಎಂಬ ಗ್ರಾಮದಲ್ಲಿ ಇರುವ ಒಬ್ಬ ಅರ್ಚಕರು ಅಲ್ಲಿನ ದೇವಸ್ಥಾನದಲ್ಲಿ ಸುಮಾರು ಮೂವತ್ತು ವರ್ಷಗಳಿಂದಲೂ ಪೂಜೆ ಮಾಡಿಕೊಂಡು ಬರುತ್ತಿದ್ದರು. ಇಲ್ಲಿನ ತಹಶೀಲುದಾರರಿಗೆ ಇವರ ಹೆಸರಿನಲ್ಲಿ ಇಲ್ಲಿನ ಭೂಮಿಯನ್ನು ಬರೆಯಬೇಕೆಂದು ಅರ್ಜಿ ಕೊಟ್ಟು ಎಷ್ಟೋ ಸಲ ಮೋಖಾ ಹೋಗಿ ಅಧಿಕಾರಿ ಗಳನ್ನು ಬೇಡುತ್ತಿದ್ದರೂ ಇನ್ನೂ ಇಲ್ಲಿನ ಅಧಿಕಾರಿಗಳು ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಲಿಲ್ಲ. ಇವರು ತಾತ ಮುತ್ತಾತಂದಿರ ಕಾಲದಿಂದಲೂ ಪೂಜೆ ಮಾಡಿಕೊಂಡು ಬಂದಂತಹವರು ಮತ್ತು ಜಮೀನನ್ನು ಉತ್ತು ಬೆಳೆ ಬೆಳೆದು ಜೀವನ ಮಾಡಿಕೊಂಡು ಬರುತ್ತಿದ್ದವರು. ಇಂತಹವರಿಗೆ ಇಲ್ಲಿನ ಅಧಿಕಾರಿಗಳು ರಕ್ಷಣೆ ಕೊಡದೆ ಒಂದು ರೀತಿಯಾದ ತಾತ್ಸಾರ ಭಾವನೆ ಅನುಸರಿಸುತ್ತಿದ್ದಾರೆ. ಇಂತಹ ಬೇಜವಾಬುದಾರಿ ಅಧಿಕಾರಿ ಗಳನ್ನು ಸರಕಾರ ತಕ್ಷಣ ತನಿಖೆ ಮಾಡಿ ಇಂತಹವರಿಗೆ ಶಿಕ್ಷೆ ಏಕೆ ಕೊಡಬಾರದು? ಎಂದು ಇಲ್ಲಿ ಕಳಕಳಿಯಿಂದ ರೆವಿನ್ಯೂ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇಂತಹ ಅಧಿಕಾರಿಗಳನ್ನು ಸರಿಯಾಗಿ ಶಿಕ್ಷೆ ಮಾಡದೇ ಹೋದರೆ ಇನ್ನೂ ತಾಲ್ಲೂಕಿನ ಅಭಿವೃದ್ಧಿ ಕೆಲಸಗಳನ್ನು ಯಾವ ರೀತಿ ಮಾಡಲು ಯೋಚನೆ ಮಾಡುತ್ತೀರಿ? ನನಗೇನೋ ನಮ್ಮ ರೆವನ್ಯೂ ಮಂತ್ರಿಗಳಲ್ಲಿ ನಂಬಿಕೆ ಇದೆ ಮತ್ತು ಇವರು ದೇವರಲ್ಲಿ ಹೆಚ್ಚು ನಂಬಿಕೆಯುಳ್ಳ ವರು ಮತ್ತು ದೇವಾಲಯಗಳನ್ನು ಚೆನ್ನಾಗಿ ಮುಂದೆ ತರಬೇಕು ಎನ್ನುವ ಉತ್ಸಾಹವೂ ಇದೆ. ಆದರೆ ಇಂತಹ ಅಧಿಕಾರಿಗಳು ಇವರ ಕೈಕೆಳಗೆ ಕೆಲಸ ಮಾಡುತ್ತಿದ್ದರೆ ಇವರು ಹೇಗೆ ಸರಕಾರದ ಕೆಲಸ ಕಾರ್ಯ ಗಳನ್ನು ಸರಿಯಾಗಿ ಮಾಡಲು ಸಾಧ್ಯ ಎನ್ನುವುದನ್ನು ಅವರು ಯೋಚನೆ ಮಾಡಬೇಕು. ಈಗ ಮಾನ್ಯ ಸಚಿವರು ಇರುವುದರಿಂದ ಸ್ವಲ್ಪಮಟ್ಟಿನ ದೇವಾಲಯಗಳಿಗೆ ಅನಕೂಲಗಳಾಗಬಹುದು. ಆದರೆ ಮುಂದೆ ಇಂತಹವರೇ ಮಂತ್ರಿಗಳಾಗಿ ಬರುತ್ತಾರೆ ಎನ್ನುವ ನಂಬಿಕೆ ಏನಿದೆ ? ಮುಂದೆ ಈ ದೇವಾಲಯಗಳ ಗತಿ ಏನು ಆಗುತ್ತದೆ ಯಾವ ರೀತಿ ವ್ಯವಸ್ಥೆಯಾಗುತ್ತದೋ ನೋಡಬೇಕಾಗುತ್ತದೆ ಇದಕ್ಕಾಗಿ ನಾನು ಮಾನ್ಯ ಸಚಿವರಲ್ಲಿ ಹೇಳುವುದು ಯಾವ ಒಂದು ಉದ್ದೇಶಕ್ಕಾಗಿ ದೇವಾಲಯಗಳ ಭೂಮಿಯನ್ನೆಲ್ಲಾ ಸರಕಾರ ವಹಿಸಿ ಕೊಳ್ಳುತ್ತದೋ ಅಂದಿನಿಂದ ದೇವಸ್ಥಾನಗಳ ಪರಿಪೂರ್ಣ ಹೊಣೆ ಸರಕಾರದ್ದಾಗುತ್ತದೆ ಮತ್ತು ಇದರ ಬಗ್ಗೆ ಹೆಚ್ಚು ಜವಾಬುದಾರಿ ವಹಿಸಿಕೊಳ್ಳಬೇಕು. ಇಂದು ಈ ಮಸೂದೆ ತಂದು ಇಲ್ಲಿ ಪಾಸು ಮಾಡಿಕೊಂಡರೆ ಸಾಲದು. ಹಿಂದಿನಿಂದ ಬಂದಿರುವ ಸಂಸ್ಕೃತಿ ಹಾಗೂ ದೇವರಲ್ಲಿ ಪರಿಪೂರ್ಣ ನಂಬಿಕೆ ಇರುವವರಾದ ನಾವು ಇದನ್ನು ಸರಿಯಾಗಿ ಉಳಿಯುವಂತೆ ಮಾಡಬೇಕು. ದೇವಾಲಯಗಳನ್ನು ಸಾಮಾನ್ಯವಾಗಿ ಶ್ರೀಮಂತರಾಗಿ ರುವ ಜನ ಕಟ್ಟುವರು ಕಟ್ಟಿರುವ ದೇವಾಲಯಗಳಲ್ಲಿರುವ ದೇವರನ್ನು ದರ್ಶನ ಮಾಡಲು ದಿನ ನಿತ್ಯ ಜನ ಬರುತ್ತಾರೆ ತಮ್ಮ ಕಷ್ಟಗಳನ್ನು ಪರಿಹರಿಸಿಕೊಳ್ಳಬೇಕೆಂದು ಅಲ್ಲಿಗೆ ಬರುತ್ತಾರೆ. ಉದಾಹರಣೆಯಾಗಿ ಹೇಳ ಬೇಕಾದರೆ ನಮ್ಮ ಬೆಂಗಳೂರು ನಗರದಲ್ಲೇ ಸಜ್ಜನರಾವ್ ಸರ್ಕಲ್ಲಿನ ಹತ್ತಿರ ಕಟ್ಟಿರುವ ಸುಬ್ರಮಣ್ಯೇಶ್ವರ

(ಶ್ರೀ ಟಿ ಎಂ. ಮಂಜುನಾಥ್)

ದೇವಾಲಯ ಈಗಿನವರ ಹಿಂದಿನ ವಂಶದವರು ಕಟ್ಟಿದ್ದಾರೆ. ಇದು ವಂಶಪಾರಂಪರ್ಯವಾಗಿ ನಡೆದುಕೊಂಡು ಬಂದು ಇಂದು ಚೆನ್ನಾಗಿ ನಡೆಯುತ ಬರುತ್ತಿದೆ ಮತ್ತು ನಗರದ ಎಲ್ಲ ಜನರೂ ಅಲ್ಲಿಗೆ ಹೋಗಿ ದೇವರಿಗೆ ಪೂಜೆ ಇತ್ಯಾದಿಗಳನ್ನು ಮಾಡಿಕೊಂಡು ಬರುತ್ತಿರುವುದನ್ನು ನಾವೆಲ್ಲರೂ ದಿನ ನಿತ್ಯ ನೋಡಬಹುದು, ಇಲ್ಲಿಗೆ ಜನ ಹೋಗಿ ದೇವರ ಆಶೀರ್ವಾದವನ್ನು ಪಡೆಯಬೇಕೆಂದು ಹೋಗುತ್ತಾರೆ ಇದರಿಂದ ನಮ್ಮ ದೇಶದಲ್ಲಿರುವ ಹಿಂದೂ ಸಂಸ್ಕೃತಿ ಉಳಿಸಿಕೊಂಡು ಬರುತ್ತಿದ್ದಾರೆ. ಇಂದು ದೇವರಲ್ಲಿ ಹಾಗೂ ಧರ್ಮದಲ್ಲಿ ನಂಬಿಕೆ ಜನರಲ್ಲಿ ಹೋದುದರಿಂದಲೇ ದೇಶದಲ್ಲಿ ಇಂತಹ ಭೀಕರ ಬರಗಾಲ ಬರಲು ಕಾರಣವಾಗಿದೆ, ದೇವಾಲಯಗಳನ್ನು ಕಟ್ಟಿಸಿ ಇದರ ಕೆಲಸ ಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ನಡೆಸುವುದು ನಮ್ಮ ಸಮಾಜದ ಜನರನ್ನು ಉದ್ಧಾರ ಮಾಡುವುದಕ್ಕೋಸ್ಕರ. ಇಂತಹ ಧಾರ್ಮಿಕ ಸಂಸ್ಥೆಗಳನ್ನು ನಾವು ಚೆನ್ನಾಗಿ ಬೆಳೆಸಿಕೊಂಡು ಬರಬೇಕು, ಇದರಿಂದ ಧರ್ಮಕ್ಕೂ ಜಯವಾಗುತ್ತದೆ ದೇಶಕ್ಕೂ ಜಯವಾಗುತ್ತದೆ. ಇದನ್ನು ನಾವು ಮಹಾಭಾರತ ಹಾಗೂ ರಾಮಾಯಣ ಇಂತಹ ಚರಿತ್ರೆಗಳನ್ನು ಓದಿ ತಿಳಿದುಕೊಂಡಿದೇವೆ. ಆದುದರಿಂದ ನಾನು ಸರಕಾರದಲ್ಲಿ ಕೇಳಿಕೊಳ್ಳುವುದು ದೇವಾಲಯಗಳನ್ನು ಬೆಳೆಸುವ ಜವಾಬುದಾರಿಯನ್ನು ಸರಕಾರ ವಹಿಸಿಕೊಳ್ಳುವಾಗ ಹಿಂದೆ ಯಾವ ರೀತಿಯಾಗಿ ಧರ್ಮ ಹಾಗೂ ಸಂಸ್ಕೃತಿಯನ್ನು ಬೆಳೆಸಲು ಮಾಡುತ್ತಿದ್ದರೋ ಅದೇ ರೀತಿ ಇನ್ನು ಮುಂದೆಯೂ ಮಾಡಲು ಅವಕಾಶ ಮಾಡಿ ಇವರ ಕೆಲಸ ಕಾರ್ಯಗಳನ್ನು ಕೊಡಬೇಕು ಮತ್ತು ಆ ಮೂಲಕ ಜನರಲ್ಲಿ ಧರ್ಮದ ಜಾಗೃತಿ ಹೆಚ್ಚಾಗಬೇಕು

ಆವಶ್ಯಕತೆಗಿಂತ ಹೆಚ್ಚು ಜಮೀನು ಇದ್ದರೆ, ಅದನ್ನು ಸರ್ಕಾರದವರು ವಶಪಡಿಸಿಕೊಂಡರೆ ಅದರಲ್ಲಿ ತಪ್ಪೇನು ಇಲ್ಲ. ಬೇಕಾದರೆ ಮನುಷ್ಯರಿಗೆ ಭೂಮಿತಿಯನ್ನು ಅನ್ವಯಮಾಡಿರುವಂತೆ ದೇವಸ್ಥಾನಗಳಿಗೂ ಅನ್ವಯ ಮಾಡಿ ಆದರೆ ಮಾಡತಕ್ಕಂಥ ಕಾರ್ಯ ಸಫಲವಾಗಬೇಕು. ಇಂದು ಅನೇಕ ಮುಜರಾಯಿ ದೇವಸ್ಥಾನಗಳಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುತ್ತಿದ್ದರೂ ಸಹ ಅವುಗಳ ರಿಪೇರಿಯಾಗದೇ ನಶಿಸಿ ಹೋಗುತ್ತಿವೆ. ಮತ್ತು ಬಿದ್ದು ಹೋಗುತ್ತಿವೆ. ಮಾನ್ಯ ಮಂತ್ರಿಗಳು ನಮ್ಮ ಊರಿಗೆ ಬಂದಾಗ ಅವರಿಗೆ ಅಲ್ಲಿರುವ ಕಲ್ಲೇಶ್ವರ ದೇವಸ್ಥಾನದ ಪರಿಸ್ಥಿತಿಯನ್ನು ತೋರಿಸಿದೆವು. ಅದರ ತೊಲೆಗಳು ಮತ್ತು ಹೆಂಚುಗಳು ಬೀಳುವ ಸ್ಥಿತಿಯಲ್ಲಿದೆ. ವರ್ಷಕ್ಕೆ ಸಾವಿರಾರು ರೂಪಾಯಿಗಳಷ್ಟು ಆದಾಯ ಸರ್ಕಾರಕ್ಕೆ ಈ ದೇವಸ್ಥಾನದಿಂದ ಬರುತ್ತಿರುವುದರಿಂದ, ಸರ್ಕಾರದವರು ಈ ದೇವಸ್ಥಾನದ ರಿಪೇರಿಯನ್ನು ಮಾಡಿಸಿಕೊಡಲಿ ಎಂದು ಕೇಳಿಕೊಳ್ಳುತ್ತೇನೆ. ಹಿಂದೆ ನಮ್ಮ ಹಿರಿಯರು ಯಾವ ಉದ್ದೇಶಕ್ಕಾಗಿ ಈ ದೇವಸ್ಥಾನಗಳ ಹೆಸರಿನಲ್ಲಿ ಜಮೀನನ್ನು ಬಿಟ್ಟಿದ್ದಾರೋ, ಆ ಉದ್ದೇಶ ಸಫಲವಾಗುವಂತೆ ಸರ್ಕಾರದವರು ನೋಡಿಕೊಂಡರೆ ಆಗ ಅವರ ಆತ್ಮಕ್ಕೂ ಶಾಂತಿ ಸಿಗುತ್ತದೆ. ಸರ್ಕಾರದವರು ಇದರ ಬಗ್ಗೆ ಹೆಚ್ಚಿನ ಜವಾಬ್ದಾರಿ ತೆಗೆದುಕೊಂಡು ದೇವಸ್ಥಾನದ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆದುಕೊಂಡು ಹೋಗುವಂತೆ ನೋಡಿಕೊಳ್ಳಬೇಕು. ಇನ್ನೂ ಹೆಚ್ಚಿನ ಬದಲಾವಣೆಗಳನ್ನು ಮಾಡಿ ಈ ಬಿಲ್‌ನ್ನು ತಂದಿದ್ದರೆ ಚೆನ್ನಾಗಿರುತ್ತಿತ್ತು. ಮುಖ್ಯವಾಗಿ ಮೂಲಧನವಾಗಿ ಸ್ವಲ್ಪ ಆಸ್ತಿಯನ್ನು ದೇವಸ್ಥಾನದ ಹೆಸರಿನಲ್ಲಿ ಇಟ್ಟು ಹೆಚ್ಚಿನದನ್ನು ಸರ್ಕಾರದವರು ವಹಿಸಿಕೊಳ್ಳಲಿ ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸುಲುನಾಯ್ಡು (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಸಚಿವರು ತಂದಿರತಕ್ಕ ಸಂಯುಕ್ತ ಪರಿಶೀಲನಾ ವರದಿಯ ರೂಪದಲ್ಲಿರುವ ೧೯೭೬ನೇ ಇಸವಿಯ ಮೈಸೂರು ರಾಜ್ಯದ (ಮುಂಬಯಿ ಹಾಗೂ ಹೈದರಾಬಾದ್ ಪ್ರದೇಶಗಳ) ಮತ ಸಂಬಂಧವಾದ ಹಾಗೂ ಧರ್ಮದಾಯ ಇನಾಂ ರದ್ದಿಯಾತಿಗೆ ಸಂಬಂಧಿಸಿದ ವಿಧೇಯಕವನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ, ನಾಲ್ಕು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ. ಈಗಾಗಲೇ ಮಾತನಾಡಿದ ಅನೇಕ ಮಾನ್ಯ ಸದಸ್ಯರು ಕೆಲವು ವಿಷಯಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಈ ಇನಾಂ ಹೇಗೆ ಬಂತು ? ಎಂಬುದನ್ನು ನಾವು ನೋಡಬೇಕು. ಇದು ನಮಗೆ ಹೊಸದಲ್ಲ. ಅನಾದಿ ಕಾಲದಿಂದ ಇದು ನಡೆದುಕೊಂಡು ಬಂದಿದೆ. ಇದಕ್ಕೆ ಚರಿತ್ರೆಯಲ್ಲಿ ಆಧಾರವಿದೆ. ಮಾನ್ಯ ಕಂದಾಯ ಮಂತ್ರಿಗಳು ಬಹಳ ದೂರ ದೃಷ್ಟಿಯಿಂದ ಇದನ್ನು ತಂದಿದ್ದಾರೆ. ಇದು ಕೆಲವು ಪ್ರದೇಶಗಳಿಗೆ ನ್ಯಾಯವಾಗುತ್ತದೆ, ಮತ್ತೆ ಕೆಲವು ಪ್ರದೇಶಗಳಿಗೆ ಅನ್ವಯವಾಗುವುದಿಲ್ಲ. ಆದ್ದರಿಂದ ಸಮಗ್ರವಾದಂಥ ಬಿಲ್ " Bill " ತಂದಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನ್ನ ಕೆಲವು ಮಿತ್ರರು ಹೇಳುತ್ತಿದ್ದರು. ಒಂದು ಸಣ್ಣ ಮಗು ಮೊದಲು ಅಂಬೆಗಾಲಿಟ್ಟು, ನಂತರ ನಡೆಯುವುದನ್ನು ಕಲಿತು, ಅನಂತರ ಯಾವ ರೀತಿ ಓಡುತ್ತದೋ, ಅದೇ ರೀತಿ ನಾವು ಇದನ್ನು ಸಹ ಹಂತಹಂತವಾಗಿ ಮಾಡಬೇಕಾಗುತ್ತದೆ. ಯಾವ ಕಾರ್ಯಕ್ರಮ ಕೈಕೊಂಡರೂ ದೂರದೃಷ್ಟಿ ಇಟ್ಟುಕೊಂಡು ಮಾಡಬೇಕಾಗುತ್ತದೆ. ಇದು ನಮ್ಮ ಹಿಂದುಗಳ ಸಂಪ್ರದಾಯ ರೆವಲೂಷನ್ ಥ್ರೂ ಎವಲೂಷನ್ (Revolution Through Evolution) ಎಂಬುದನ್ನು ನಾನು ನಂಬುತ್ತೇವೆ. ನಾವಿಂದು ವಿಜ್ಞಾನ ಯುಗದಲ್ಲಿದ್ದೇವೆ.

ಚರಿತ್ರೆಯ ಆಧಾರದ ಮೇಲೆ ನಾವು ಬದಲಾವಣೆಗಳನ್ನು ಮಾಡಬೇಕೆಂದು ಬಯಸುತ್ತೇವೆ. ಮೊದಲು ನಮ್ಮ ''ರಾಜ್ಯ'' ಕಾರಣಾಂತರಗಳಿಂದ ಹರಿದು ಹಂಚಿಹೋಗಿತ್ತು. ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮದ್ರಾಸ್ ಕರ್ನಾಟಕ ಎಂದು ಹರಿದು ಹಂಚಿಹೋಗಿತ್ತು ಆಗ ಒಂದೊಂದು ಕಡೆ ಒಂದೊಂದು ರೀತಿಯ ಶಾಸನ ಜಾರಿಯಲ್ಲಿತ್ತು. ಈಗ ಎಲ್ಲ ಭಾಗಗಳು ಒಂದುಗೂಡಿದ ಮೇಲೆ ಒಂದು ''ಸಮಗ್ರವಾದಂಥ'' ಶಾಸನವನ್ನು ನಾವು ರಚನೆ ಮಾಡಬೇಕಾಗಿದೆ. ಈ ರೀತಿ ಸಮಗ್ರ ಶಾಸನ ತರುವುದರಲ್ಲಿ ಇದು ''ನಾಂಧಿಯಾಗಿದೆ.'' ಮೊದಲು ''ದಾನ" ಮಾಡಬೇಕೆಂದರೆ ಜಮೀನು ಒಂದೇ ಇರುವುದು ಎಂದು ಜನರು ತಿಳಿದಿದ್ದರು. ಈಗಿನಂತೆ ಮೆಡಲ್‌ಗಳು ತಾಮ್ರ ಪತ್ರ ಮುಂತಾದುವನ್ನು ಕೊಡುವ ಪದ್ಧತಿ ಆಗ ಇರಲಿಲ್ಲ. ಹಿಂದಿನ ಕಾಲದವರು ದೇವಸ್ಥಾನಗಳಿಗೆ ಏಕೆ ಅಷ್ಟೊಂದು ಪ್ರಾಮುಖ್ಯತೆ ಕೊಟ್ಟಿದ್ದರು ಎಂಬುದನ್ನು ಮೊದಲು ಹೇಳುತ್ತೇನೆ. ನನಗೆ ಒಂದು ಸಂದೇಹ ಬಂದಿದೆ ಅದು ಏನೆಂದರೆ ಕಾಲ ಧರ್ಮವನ್ನು ಅನುಸರಿಸುತ್ತದೋ ಅಥವಾ ಧರ್ಮ ಕಾಲವನ್ನು ಅನುಸರಿಸುತ್ತದೋ ಎಂಬ ಬಗ್ಗೆ. ದೇವಸ್ಥಾನಗಳನ್ನು ಕಟ್ಟಿಸಿರುವ ಉದ್ದೇಶ ಎಲ್ಲರಿಗೂ ಗೊತ್ತಿದೆ. ದೇವಸ್ಥಾನಗಳನ್ನು ಊರಿನ ಮಧ್ಯಭಾಗದಲ್ಲಿ ಅಥವಾ ಬೆಟ್ಟದ ಮೇಲೆ ಕಟ್ಟಿಸುತ್ತಿದ್ದರು ಎಂದು ನಮ್ಮ ಮಿತ್ರರು ಹೇಳುತ್ತಿದ್ದರು. ಜನರಲ್ಲಿ '' ಭಾವೈಕ್ಯತೆ '' ಬರಲಿ ಎಂಬ ಘನ ಉದ್ದೇಶದಿಂದ ದೇವಸ್ಥಾನಗಳನ್ನು ಕಟ್ಟಿಸುತ್ತಿದ್ದರು ಎಂದು ನಾನು ತಿಳಿದುಕೊಂಡಿದ್ದೇನೆ ಇದೇ ಕಾರಣದಿಂದ ಇಂದಿಗೂ ಕೂಡ ಜನರು ಧರ್ಮಸ್ಥಳ ಉಡುಪಿ ರಾಮೇಶ್ವರ, ಕಾಶಿ, ಪೂರಿ, ಜಗನ್ನಾಥ ಮುಂತಾದ ಪುಣ್ಯ ಕ್ಷೇತ್ರಗಳಿಗೆ ಯಾತ್ರೆ ಹೋಗಿ ಬರುತ್ತಿದ್ದಾರೆ. ನದಿಗಳು ಹೇಗೆ ಎಲ್ಲ ಕಡೆಗಳಲ್ಲಿಯೂ ಭೇಧ ಭಾವ ವಿಲ್ಲದೆ ಹೇಗೆ ಹರಿಯುತ್ತವೆಯೋ ಅದೇ ರೀತಿ ಎಲ್ಲ ಕಡೆಗಳಲ್ಲಿಯೂ ಒಂದು ಘನ ಉದ್ದೇಶದಿಂದ ಅಂದರೆ ಜನರಲ್ಲಿ ''ಭಾವೈಕ್ಯತೆ'' ಮಾಡಲಿ ಎಂಬ ಕಾರಣದಿಂದ ಈ ದೇವಸ್ಥಾನಗಳನ್ನು ಹಿಂದಿನವರು ಎಲ್ಲ ಕಡೆಗಳಲ್ಲಿಯೂ ಕಟ್ಟಿಸಿದರು.

ಶ್ರೀ ಎಚ್. ಎನ್. ಸಿದ್ದಪ್ಪ.—ಮಂತ್ರಿಗಳನ್ನು ಸಹ ಕಾಶಿಯಾತ್ರೆಗೆ ಕಳಿಸಿಕೊಡಿ.

ಶ್ರೀ ಕೆ. ಆರ್. ಶ್ರೀನಿವಾಸುಲುನಾಯ್ಡು.— ಧರ್ಮಕ್ಕೆ ಸೇರಿದ ವಿಷಯವನ್ನು ಮತ್ತು ಅರ್ಥಕ್ಕೆ ಸಂಬಂಧಪಟ್ಟ ವಿಷಯವನ್ನು ಸೇರಿಸಿ, ಈ ಎರಡನ್ನೂ ''ಕಲಸುಮೇಲೋಗರ'' ಮಾಡಿಬಿಟ್ಟಿದ್ದಾರೆ ಇದೇ ಕಷ್ಟಕ್ಕೆ ಬಂದಿರುವುದು. ದೇವಸ್ಥಾನಗಳನ್ನು ಕಟ್ಟಿಸುತ್ತಿದ್ದ ಉದ್ದೇಶ ಜನರಲ್ಲಿ ಭಾವೈಕ್ಯತೆ ಮಾಡಲಿ ಎಂಬ ಒಂದೇ ಕಾರಣದಿಂದ ಅಲ್ಲ, ದೇವಸ್ಥಾನಗಳಲ್ಲಿ ಹಿಂದಿನ ಕಾಲದಲ್ಲಿ ಶಾಸ್ತ್ರೀಯ ವಿದ್ಯೆಗಳನ್ನು ಸಹ ಕಲಿಸುತ್ತಿದ್ದರು. ದೇವಸ್ಥಾನಗಳಲ್ಲಿ ಲಲಿತಕಲೆಗಳಿಗೆ ಪ್ರಾಮುಖ್ಯತೆ ಕೊಡುತ್ತಿದ್ದರು. ಸಂಗೀತ, ವಾದ್ಯ ಮುಂತಾದವುಗಳಿಗೆ ಪ್ರೋತ್ಸಾಹ ಕೊಡುತ್ತಿದ್ದರು. ದೇವಸ್ಥಾನಗಳಿಗೆ ಹಿಂದಿನವರು ಯಾವ ರೀತಿ ಮಾತ್ಯತೆ ಕೊಡುತ್ತಿದ್ದರು ಎಂಬ ಬಗ್ಗೆ ಇನ್ನು ಮುಂದೆ ಹೇಳುತ್ತೇನೆ. ಈ ದೇವಸ್ಥಾನಗಳ ಬಗ್ಗೆ ನಮ್ಮ ದೇಶದ ಕವಿಗಳಾದ ರನ್ನ, ಪಂಪ, ಲಕ್ಷ್ಮೀಶ ಮುಂತಾದವರು ಏನು ಹೇಳಿದ್ದಾರೆಂಬುದನ್ನು ಸಹ ನಾವು ನೋಡಬೇಕು.

ಈ ಸಂದರ್ಭದಲ್ಲಿ ಡಾ. ರಾಧಾಕೃಷ್ಣನ್ ಅವರು ಹೇಳಿದಂತಹ ಒಂದು ಮಾತನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಅದು ಈ ರೀತಿ ಇದೆ.—A blind impolse to destroy seems to have taken possession of the people and if th re is no check to it, we will take a long stride towards final extinction of the race and be prepared for an era of intellectual darkeess and ethical barbarism in which man's noblest accomplishments of the past work are laid vain. ಎಂದು ಹೇಳಿದ್ದಾರೆ. ಇದನ್ನು ನಮ್ಮ ಮಾನ್ಯ ಸ್ನೇಹಿತರು ಒಪ್ಪಿಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇವೊತ್ತು ನಾವು ''ಅಧುನಿಕ ಯುಗದಲ್ಲಿದ್ದೇವೆ."ಆದ್ದರಿಂದ ನಮಗೆ ಆಧ್ಯಾತ್ಮಿಕ ದೃಷ್ಟಿ ಕಡಿಮೆಯಾಗಿ ನಾವು ಪ್ರಾಪಂಚಿಕ ದೃಷ್ಟಿಯಲ್ಲಿ ಎಂದರೆ ಲೌಕಿಕದಲ್ಲಿ ತೊಡಗಿದ್ದೇವೆ. ನಮ್ಮ ಇಂಡಿಯಾ ದೇಶದ ಸಂಸ್ಕೃತಿ ಹಾಗಿಲ್ಲ. ನಮ್ಮ ಹಿಂದೂದೇಶದ ಸಂಸ್ಕೃತಿ ಹೇಗಿದೆ ಎಂದರೆ Indian secularsm encourages people to work out a turth in diversity which is essentially a product of our great cultural heritage. ಆದ್ದರಿಂದ ಇದರ ಬಗ್ಗೆ ಯಾರೂ ಸಂದೇಹ ಪಡಬೇಕಾಗಿಲ್ಲ. ದೇವಸ್ಥಾನದಲ್ಲಿ ದೇವರ ಪೂಜೆ ಮುಂತಾದ ಕೈಂಕರ್ಯಗಳು ಸರಿಯಾಗಿ ನಡೆಯುವ ದೃಷ್ಟಿಯಿಂದ ದೇವಸ್ಥಾನಗಳಿಗೆ ಮಾನ್ಯ ಇರುವುದು ತಪ್ಪೇನು ಅಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನವ ದೇವರನ್ನು ಸೃಷ್ಟಿಸಿದನೋ ಅಥವಾ ದೇವರು ಮಾನವನನ್ನು ಸೃಷ್ಟಿಸಿದನೋ ಎನ್ನುವ ಒಂದು ವಾದ ಇದೆ. ಇದರ ಬಗ್ಗೆ ತಾವು ಏನು ಹೇಳುತ್ತೀರಾ?

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಕ್ರಿಶ್ಚಿಯನ್‌ರಿಗೂ ಒಂದು ಧರ್ಮ ಇದೆ, ಹಿಂದೂಗಳಿಗೂ ಒಂದು ಧರ್ಮ ಇದೆ ಎಂಬುದನ್ನು ಮರೆಯಬಾರದು. The wole world accepts the existence of religion. Religion always is a prominent part in public life. ತಾವು ಕೇಳುವುದು ''ಬೀಜವೃಕ್ಷ ನ್ಯಾಯದಂತಿದೆ''

ಶ್ರೀ ಕೋಣಂದೂರು ಲಿಂಗಪ್ಪ.—ಆತ್ಮ ಪರಮಾತ್ಮ ಆಗಬೇಕು ಎಂಬುದು ನನಗೆ ಗೊತ್ತು. ಅಹಂ ಬ್ರಹ್ಮಾಸ್ಮಿ. ದೇವರ ಪ್ರತಿಮೆಯನ್ನು ಸೃಷ್ಟಿಸಿದವನ್ನು ಮಾನವ ಎಂಬೂದೂ ನನಗೆ ಗೊತ್ತು.

MR. DEPUTY SPEAKER.—There is a big controversy whether God created man or man created God. it will be raging for centuries to come

SRI K. R. SRINIVASULU NAIDU.—I believe in evolution but not in revolution.

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಮಸೂದಾ ಕಾನೂನಿಗೆ ಸಂಬಂಧಪಟ್ಟ ಹಾಗೆ ಚರ್ಚೆ ಸೀಮಿತವಾಗಿದ್ದರೆ ಒಳ್ಳೆಯದು.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಈ ಮಸೂದೆಗೆ ಸಂಬಂಧಪಟ್ಟ ಹಾಗೆ, ಚಾರಿಟಬಲ್ ಇನ್‌ಸ್ಟಿಟ್ಯೂಷನ್ ಮತ್ತು ದೇವಸ್ಥಾನಗಳಿಗೆ ಸಂಬಂಧಪಟ್ಟಹಾಗೆ ಅವುಗಳ ಹಿನ್ನೆಲೆಯನ್ನು ನಾನು ಹೇಳುತ್ತಿದ್ದೇನೆ. ಮಾನ್ಯ ಕಂದಾಯ ಮಂತ್ರಿಗಳು ಈ ದೇವಸ್ಥಾನಗಳಿಗೆ ಸಂಬಂಧಪಟ್ಟಹಾಗೆ ೧೯ ಜಿಲ್ಲೆಗಳಿಗೂ ಒಂದೇ ತರಹ ಸಮಗ್ರವಾದ ನಿಯಮವನ್ನು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಈ ಆಕ್ಟಿನಲ್ಲಿರುವ ಕೆಲವು ಲೋಪದೋಷಗಳನ್ನು ನಾನು ಹೇಳುತ್ತೇನೆ. ಇದರಲ್ಲಿ ಕೆಲವು ಪ್ರಾಕ್ಟಿಕಲ್ ಡಿಫಿಕಲ್ಟೀಸ್ ಇವೆ. ಈಗ ಲ್ಯಾಂಡ್‌ರೆವಿನ್ಯೂ ಕೋಡಿನ ೭೯ನೇ ಸೆಕ್ಷನ್ ಪ್ರಕಾರ ಟೆನೆನ್ಸಿಯನ್ನು ಪ್ರೂವ್ ಮಾಡುವುದು ಕಷ್ಟವಾಗಿದೆ. ಏತಕ್ಕೆಂದರೆ ಇದರಲ್ಲಿ ಪರ್ಮನೆಂಟ್, ಟೆನೆಂಟ್, ಪ್ರೊಟೆಕ್ಟೆಡ್, ಟೆನೆಂಟ್, ಕ್ವಾಸಿ ಟೆನೆಂಟ್ ಈ ತರಹ ಅನೇಕ ತರಹ ಇದೆ. ಗೇಣಿದಾರರಿಗೆ ಆಕ್ಯುಪೆನ್ಸಿ ರೈಟ್ಸ್ ಬರಬೇಕಾದರೆ ಭೂಕಂದಾಯದ ಇಪ್ಪತ್ತರಷ್ಟು ಪ್ರೀಮಿಯಂ ಅನ್ನು ಗೇಣಿದಾರ ಸರ್ಕಾರಕ್ಕೆ ಕಟ್ಟಬೇಕು ಎಂದು ಇದೆ. ಈಗ ದೇವಸ್ಥಾನದಲ್ಲಿ ದೇವರನ್ನು ಪೂಜೆ ಮಾಡತಕ್ಕ ಪೂಜಾರಿ ನ್ಯಾಯ, ಧರ್ಮಸತ್ಯದಿಂದ ದೇವರನ್ನು ಪೂಜೆ ಮಾಡುತ್ತಿರುತ್ತಾನೆ.

ಕಾನೂನು ಪ್ರಕಾರ ಇವರಿಗೆ ರೈಟ್ಸ್ ಬಂದ ಮೇಲೆ ಅವರ ಕೆಲಸವನ್ನೂ ಅವರು ಸರಿಯಾಗಿ ಮಾಡು ಮಾಡುತ್ತಾರೆಯೇ ; ಹಾಗೆ ಮಾಡದಿದ್ದರೆ ಅವನಿಂದ ಹೇಗೆ ಕೆಲಸ ತೆಗೆದುಕೊಳ್ಳಬೇಕೆಂಬುದನ್ನು ಯೋಜನೆ ಮಾಡಬೇಕು. ಹಿಂದೆ ಸರ್ವಿಸಿಗೋಸ್ಕರ ಇನಾಂ ಕೊಟ್ಟಿದ್ದರು. ಆದ್ದರಿಂದ ಇದರ ಬಗ್ಗೆ ಏನಾದರೂ ತಾವು ಈ ಬಿಲ್ಲಿನಲ್ಲಿ ಅಳವಡಿಸಿದ್ದೀರಾ ? ಜೊತೆಗೆ ಸೆಕ್ಷನ್ ೭ರಲ್ಲಿ ಪೂಜಾರಿ ಮತ್ತು ಅರ್ಚಕರಿಗೆ ಎಂದು ಹೇಳಿದ್ದೀರಿ. ಅದರೆ ದೇವಸ್ಥಾನವನ್ನೇ ನಂಬಿ ಇದ್ದ ಜನರು ಇನ್ನೂ ಅನೇಕರು ಇದ್ದಾರೆ ಹಿಂದಿನ ಕಾಲದಲ್ಲಿ ದೇವಸ್ಥಾನಕ್ಕೆ ದೇವದಾಸಿಗಳು ಮಾಮೂಲೇದಾರರು, ಭಜಂತ್ರಿಗಳು ದೀವಟಿಗೆಗಾರರು. ಮಂತ್ರಿತರ ಸೇವಾ ವರ್ಗದವರು ಇದ್ದು ಅವರಿಗೆ ಇನಾಂ ಲ್ಯಾಂಡುಗಳನ್ನು ಕೊಟ್ಟಿದ್ದರು. ಅಂಥವರಿಗೆ ಇದರಲ್ಲಿ ಏನೂ ಪ್ರೊಟೆಕ್‌ಸ್ ಕೊಡುತ್ತೀರಿ ಎಂಬುದನ್ನು ಕೇಳುತ್ತೇನೆ.?

5-30 P.M.

ಇದರ ಜೊತೆಗೆ ತಾಸ್ತಿಕ್ ವಿಚಾರದಲ್ಲಿ ನನಗೆ ಒಂದು ಸಂದೇಹ ಬಂದಿದೆ, ಇದನ್ನು ಮಲ್ಟಿಪಲ್ಸ್ ಆಫ್ ಲ್ಯಾಂಡ್ ರೆವೆನ್ಯೂ ಕೊಡುತ್ತೀರಾ ಅಥವಾ ೫ ವರ್ಷದ ಲ್ಯಾಂಡ್ ರೆವೆನ್ಯೂ ಕೊಡುತ್ತೀರಾ ಎಂಬುದನ್ನು ಕೇಳುತ್ತೇನೆ. ಇದನ್ನು ಯಾವ ರೇಟ್ ಪ್ರಕಾರ ಕೊಡುತ್ತೀರಿ ಎಂದು ಹೇಳಬೇಕು. ೧೯೭೭ರಲ್ಲಿ ಮಾನ್ಯ ಶ್ರೀ ಅಣ್ಣಾರಾಯರು ದೇವಸ್ಥಾನಗಳ ಅಡ್ಮಿನಿಸ್ಟ್ರೇಶನ್ ಬಗ್ಗೆ ಒಂದು ಪುಸ್ತಕವನ್ನು ಬರೆದಿದ್ದಾರೆ. ಮಾನ್ಯ ಮಂತ್ರಿಯವರು ಅದು ಸರ್ಕಾರದ ಪರಿಶೀಲನೆಯಲ್ಲದೆ ಎಂದು ಹೇಳಿದ್ದಾರೆ. ಅದನ್ನು ಜಾರಿಗೆ ತಂದರೆ ಈ ತೊಡಕುಗಳನ್ನು ಎಲ್ಲವನ್ನೂ ನೀಗಿಸಬಹುದೆಂದು ನಾನು ಹೇಳುತ್ತೇನೆ. ಇದರ ಜೊತೆಗೆ ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ಕಾನೂನುಗಳು ಇವೆ. ಇದಕ್ಕೆ ಒಂದು ಸಮಗ್ರವಾದ ಕಾನೂನು ತರುವುದಕ್ಕೋಸ್ಕರ ಒಂದು ''ಅಡಿನಿಸ್ಟ್ರೇಶ್ ಆಫ್ ಟೆಂಪಲ್ ಎನ್‌ಕ್ವಯರಿ ಕಮಿಷನ್'' ಏಕೆ ಮಾಡಬಾರದು

ಎಂದು ನಾನು ಕೇಳುತ್ತೇನೆ. ಇದನ್ನು ಮಾಡಿದರೆ ಮೈಸೂರು ಸಂಸ್ಥಾನದಲ್ಲಿ ಎಷ್ಟು ದೇವಸ್ಥಾನಗಳು ಇವೆ, ಅವುಗಳಿಗೆ ಎಷ್ಟು ಆಸ್ತಿಗಳು ಇವೆ, ಚರ ಮತ್ತು ಸ್ಥಿರ ಆಸ್ತಿ ಎಷ್ಟು ಇದೆ, ಒಡವೆ, ಕಟ್ಟಡ ಜಮೀನು, ಇತ್ಯಾತಿ ಎಷ್ಟು ಇದೆ ಎಂಬುದನ್ನೆಲ್ಲಾ ಕೂಲಂಕಷವಾಗಿ ನೋಡಬೇಕಾದರೆ ಇದಕ್ಕೆ ಒಂದು "ಕಮಿಷನ್" ನೇಮಕ ಮಾಡಿದರೆ ಅನುಕೂಲವಾಗುತ್ತದೆ ಎನ್ನುವ ಅಭಿಪ್ರಾಯವನ್ನು ಇಲ್ಲಿ ಹೇಳುತ್ತೇನೆ.

ಇದರಿಂದ ಸುಮಾರು ೧೦ ಕೋಟಿ ರೂಪಾಯಿಯಷ್ಟು ಸಂಪಾದನೆ ಇದೆ. ಆದ್ದರಿಂದ ಈ ಇಲಾಖೆಗೆ ಒಂದು ಪರ್ಮನೆಂಟ್ ಇಂಡಿಪೆಂಡೆಂಟ್ ಮಂತ್ರಿಯವರನ್ನು ಏಕೆ ನೇಮಿಸಬಾರದು ಎಂದು ಕೇಳುತ್ತೇನೆ ಏಕೆಂದರೆ ಮದ್ರಾಸಿನಲ್ಲಿ ಮತ್ತು ಆಂಧ್ರದಲ್ಲಿ ಈಗಾಗಲೇ ಈ ಇಲಾಖೆಗೆ ಒಬ್ಬ ಪ್ರತೇಕ ಮಂತ್ರಿಯವರು ಇದ್ದಾರೆ. ಕಾರಣವೇನೆಂದರೆ ಇದಕ್ಕೆ ಬಹಳ ಆದಾಯ ಇದೆ ಮತ್ತು ಲಕ್ಷಗಟ್ಟಲೆ ಎಕರೆ ಜಮೀನು ಸಹ ಇವೆ ಈಗ ಮುಜರಾಯಿ ಕಮೀಶನರ್ ಎಂದು ಇದ್ದಾರೆ. ಆದರೆ ಅವರಿಗೆ ಇರುವಂತಹ ಪವರ್ಸ್ ಬಹಳ ಕಡಿಮೆ.

†SRI K. PUTTASWAMY (Chamundeswari).—Mr. Deputy Speaker—I am very happy to support the Bill as emerged the Joint Select Committee. And, while doing so, I would like to make a few remarks. I hope my hon. friend the Revenue Minister would be able to consider my remarks and see whether there can be any futher improvement on the report made by the Joint Select Committee.

I have been at a loss to appreciate the necessity for a new Clause number 7 which is included here. appreciate the anxiety of the Joint Select Committee in trying to safeguard the interests of the pujaris, archaks, etc. I think the House is fully aware of the position of pujaris and archaks in a large number of temples and religious institutions. They are mostly hereditary in nature and they render personal service to the religious institution from generation to generation. I looked into the proceedings of the Joint Select Committee. When they considered the question of giving protection to archaks and pujaris. The Hon. Revenue Minister was prefectly correct in trying to pose a question before the Joint Select Committee and suggesting that the interests of these pujaris and archaks should be safeguarded. The Law Minister seems to have felt that they cannot be treated as tenants because they are not paying any rent either in kind or in money. Where exactly is it said that the rent should be only in either money or in kind ? It can also be by way of personal service. It is a hard fact that we are seeing in the society. From generation to generation a family is rendsring service to the temple and in lieu of that they are allowed to be in possession of the land and cultivate the land. I for one fail to understand why the Joint Select Committee did not go a step further and treat them as tenants. What type of tenants are they to be treated is another question. In my humble opinion, they are to be treated as permanetnt tenants, because, from generation to generation they have been going on rendering service and cultiva, ting the land and taking the use of it. Threfore, I would have very much appreciated if the Joint Select Committee had tried to bring in these pujrris and archaks, whom they have brought under clause 7, under clause 4 itself Clause 4 deals with permanent tenants. Noth. ing prevented the Joint Select Committee from treating them as permanent tenants ; if only they had gone a step further, and done this, personally, I feel that their rights would have been fully safeguarded.

(SRI K. PUTTASWAMY)

Their status is that they are cultivating the land and rendering personal service to the temple. They should have been treated as permanent tenants.

SRI D. K. NAICKAR —I would like to know whether the pujaris and archaks have a relationship identical between a landlord and a tenant. They are cultivating the land not on a lease basis ; the lands are held by the deity and through the deity they are cultivating. Let my friend enlighten under what provision of law, physical labour would be amounting to rent.

SRI K. PUTTASWAMY.—I would like the Hon. Minister to realise that we are not trying to interpret Law. We are only making the Law. Now, the Joint Select Committee tried to treat them as tenant under Claus 7. Under Clause 7 the Joint Select Committee has tried to give certain protection and the same Joint Select Committee could have gone further and given them the status of permanent tenants. Nothing prevented it from doing so. It is a question of making the Law and not interpreting Law. The Hon. Law Minister will kindly appreciate this position. In the case of these pujaris and archaksy the payment is not in kind, the payment is not in money, but the payment is by way of personal labour. He wanted me to explain the relationsoip between the inamdar and the person who is rendering service The inamdar is the temple and the person who is rendering service is the tenant. He is a tenant and you can consider him as a tenant. Has personal service no value at all ? Payment of rent could have been defined so as to include payment either in money or in kind or by way of personal service. I am surprised that my friend Mr. Thimmappa is smiling at this. It is not a far-fetched logic.

SRI KAGODU THIMMAPPA.—Is it service rendered to the land lord or service rendered to the deity ?

SRI K. PUTTASWAMY.—Deity is the land lord.

ಶ್ರೀ ಡಿ. ಕೆ. ನಾಯ್ಕರ್.—ಇದರಲ್ಲಿ ಏನಿದೆಯೆಂದರೆ ಟೆನೆನ್ಸಿ ಲಾ ಪ್ರಕಾರ ಪರ್ಮನೆಂಟ್ಸ್, ಪ್ರೊಟೆಕ್ಟೆಡ್ ಟೆನೆಂಟ್ಸ್ ಅವರಿಗೆ ವೆಸ್ಟೆಡ್ ರೈಟ್ಸ್ ಇರುತ್ತದೆ. ಅಂತಹವರಿಗೆ ಕನ್‌ಸೆಷನ್ ಕೊಟ್ಟ ಮೇಲೆ ಆಕ್ಯುಪೇಷನ್ ರೈಟ್ಸ್ ಬಗ್ಗೆ ಪೂಜಾರಿ ಅವರಿಗೆ ಅಂತಹ ಯಾವ ವೆಸ್ಟೆಡ್ ಇಂಟರೆಸ್ಟ್ ಸಹ ಇಲ್ಲದೇ ಇರುವುದರಿಂದ ಅವರು ಪೂಜೆ ಮಾಡುತ್ತಿದ್ದರೇ ಅವರೇ ಅದರ ರೆಂಟನ್ನು ಎನ್‌ಜಾಯ್ ಮಾಡುತ್ತಾರೆ. ಆದರೆ ಟೆನೆಂಟ್ಸ್ ಆಗಿರುವವರಿಗೆ ಅಂಥಾದ್ದು ಯಾವುದು ಇಲ್ಲ.

SRI K. PUTTASWAMY.—He has not been able to appreciate the position at all.

ಆ ಮೇಲೆ ಇದರಲ್ಲಿ ಬರತಕ್ಕಂತಹ ಉತ್ಪತ್ತಿಯನ್ನು ಸಾರ್ವಜನಿಕ ಸೇವೆಗೋಸ್ಕರ ಉಪಯೋಗಿಸಿಕೊಳ್ಳಬಹುದು ಉದಾಹರಣೆಗೆ ವಿದ್ಯಾಭ್ಯಾಸಕ್ಕೆ, ಆಸ್ಪತ್ರೆಗಳಿಗೆ ಮತ್ತಿತರ ಸಾರ್ವಜನಿಕ ಕಾರ್ಯಗಳಿಗೆ ಇದರ ಉತ್ಪತ್ತಿಯನ್ನು ಉಪಯೋಗಿಸಿಕೊಳ್ಳಬಹುದು.

ಇನ್ನು ಸೆಕ್ಷನ್‌ನಲ್ಲ ನೊಂದ ಜನರು ಅಪೀಲಿನಲ್ಲಿ ಹೋಗುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಆದ್ದರಿಂದ ನಾವು ಭೂಸುಧಾರಣೆ ತರತಕ್ಕ ಕಾಲದಲ್ಲಿ ಇದೊಂದು ತರಹ ಭೂಸಂಹಾರಣೆ ಎಂದು ಹೇಳಬಹುದು ಆದ್ದರಿಂದ ಭೂಸುಧಾರಣೆಯ ಕಾನೂನು ಬರುವಾಗ ಇದರಲ್ಲಿ ಬರುವ ಭೂಮಿಯು ನಮ್ಮ ಕೈಗೆ ಸಿಕ್ಕಿದರೆ ಇನ್ನೂ ಹೆಚ್ಚಿಗೆ ಜನರಿಗೆ ಭೂಮಿಯನ್ನು ಹಂಚುವುದಕ್ಕೆ ಸಹಾಯವಾಗುತ್ತದೆ. ಆತ ಹಾಗೇನಾದರೂ ಕಾನೂನನ್ನು ಉಲ್ಲಂಘನೆ ಮಾಡಿದರೆ, ಮೂರು ತಿಂಗಳ ಇಂಪ್ರಿಸನ್‌ಮೆಂಟ್, ಮತ್ತು ೨೦೦ ರೂಪಾಯಿ ಫೈನ್ ಎಂದು ಹೇಳಿದ್ದಾರೆ. ಅಲ್ಲದೆ ಇದರ ಜೊತೆಗೆ, ನಮ್ಮ ಮುಜರಾಯಿ ಮ್ಯಾನ್ಯುವಲ್ ಏನಿದೆ ಅದನ್ನು ಸಹ ತಿದ್ದುಪಡಿ ಮಾಡಬೇಕೆಂದು ಈ ಸಂಧರ್ಭದಲ್ಲಿ ಒತ್ತಿ ಹೇಳುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ ನಮ್ಮಲ್ಲಿ ಇವತ್ತು ಜಾತ್ಯಾತೀತ ಸಮಾಜ, ಮತ್ತು ಸಮತಾವಾದ ಸಮಾಜವಾದ, ಆಕಾಶದಿಂದ ಬರುವುದಿಲ್ಲ ಅದಕ್ಕೆ ನಮ್ಮಲ್ಲಿ, ನಮ್ಮ ಸಮಾಜದಲ್ಲಿ ಸರಿಯಾದ ಹೃದಯ ಪರಿವರ್ತನೆಯಾಗಬೇಕು. ಅದೆಲ್ಲಾ ಆಗಬೇಕಾದರೆ, ಈ ದೇವಸ್ಥಾನಗಳು ಮತ್ತು ಧರ್ಮಸಂಸ್ಥೆಗಳ ಮುಖಾಂತರವೇ ಆಗಬೇಕು ಆದರೆ ಅದನ್ನೇ ಒಂದು ಉದ್ಯೋಗವನ್ನಾಗಿ ಮಾಡಿಕೊಳ್ಳಬಾರದು. ಎಲ್ಲರೂ ಇದನ್ನು ದೇಶದ ಹಿತದೃಷ್ಟಿಯಿಂದ ಗಮನದಲ್ಲಿಟ್ಟುಕೊಳ್ಳಬೇಕು. ಅದಕ್ಕೆ ಈ ಕಾನೂನಿನಲ್ಲಿ ಸಾಕಷ್ಟು ಅವಕಾಶ ಮಾಡಿದ್ದಾರೆಂದು ನಾನು ಭಾವಿಸುತ್ತೇನೆ. ಆದರೆ ಕೆಲವು ಪ್ರದೇಶಗಳಿಗೆ ಇದು ಅನ್ವಯವಾಗದೆ ಇರಬಹುದು. ಅವೆಲ್ಲ ಪ್ರದೇಶಗಳಿಗೂ ಅನ್ವಯವಾಗುವ ರೀತಿಯಲ್ಲಿ ಒಂದೂ ಸಮಗ್ರವಾದ ಬಿಲ್ಲನ್ನು ಸಹ ತರಬೇಕೆಂದು ಸರ್ಕಾರಕ್ಕೆ ಮನಸ್ಸು ಇದೆ. ಅವನ್ನು ಬೇಗನೇ ಮಾಡುತ್ತಾರೆ ಎಂದು ನಾನು ತಿಳಿಯುತ್ತೇನೆ. ಆದ್ದರಿಂದ ಇದಕ್ಕೆ ನನ್ನ ಬೆಂಬಲ ಮತ್ತು ಸಹಕಾರ ಕೊಟ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈಕರ್ನಾಟಕ

There is one another point which I would like to bring to the notice of this House. Under clause 31 TASDIK is paid I believe for the maintenance of the religious institutions. Under Chapter III, clause 19, how the basic annual sum should be determined is stated In clause 7, poojari archak and others who are persons cultivating lands for a continuous period of not less than 3 years prior to the appointed date by contributing his own physical labour or that of the members of his family and enjoying the benefits of any land comprised in the inam of such institution in respect of such land, shall, with effect from and on the appointed date are subject to the provisions of sub-section (2) and section 31 be entitled to be registered as an occupant of such land. And they are to be given according to the recommendations of the Joint Select Commitee 100 times the land revenue as premium. I think it would have been much better if he had come forward with an amendment for reducing it to 20 times. All these people, the distinction between the permanent tenant and protected tenant and this type of poojaries treated as third class tenents, it was not necessary. As far as poojaries are concerned, these are persons who have been rendering service to the temple from time immemorial. But any way I am happy that they are going to be registered as occupants of the land. I want to ask the Hon'ble Minister whether the interests of the religious institution are fully safeguarded. For arriving at the basic annual sum, clause 19 gives all the ingredients that have to be taken into consideration. What are the itmes that have to be excluded. I want to ask the Hon Revenue Minister the probable income from the land that is given over to the poojaries and archaks. Should it not also be taken into consideration? As long as the inams are in existence, they were cultivating the land and rendering personal service. As soon as he becomes a registered occupant, he will cease to render

(SRI K. PUTTASWAMY)

personal service. We do not also expect him to give free service. If we should expect him to render service, you will have to make payament. Where do the religious institutions get the money? Therefore, I would feel that the probable income that this category of land is going to yield should be taken as one of the items for arriving at the Tasdik payabl to the religious institutions.

ಶ್ರೀ ಎನ್. ಹುಚ್ಚ ಮಾಸ್ತಿಗೌಡ:—ಭೂಮಾಲೀಕರಿಗೆ ಕಂದಾಯದ ಇಷ್ಟು ಪಟ್ಟು ಎಂದೇನು ಒಂದು ಗೇಣಿಯನ್ನು ಕೊಡಲಾಗುತ್ತಿತ್ತು, ಅದರ ಆಧಾರದ ಮೇಲೆಯೇ ಇದನ್ನು ಕೂಡ ಕಂದಾಯದ ೨೫ ರಷ್ಟು ತಸ್ದಿಕ್ ಕೊಡಬೇಕೆಂದು ನಿಗದಿಮಾಡಿರುತ್ತೆ.

SRI K. PUTTASWAMY.: Any way there has been very earnest attempt made to improve over the report of the recommendations of the Joint Select Committee. I wish he goes a little further. Whether 25 per cent of the land revenue is going to be of any help to the religious institution is a point the Hon'ble Revenue Minister who is incharge of the Muzrai institution also will have to take into consideration. I cannot advise him on this question.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಟ್ಟಿನಲ್ಲಿ ಗೇಣೀದಾರನಿಗೆ ಅನುಕೂಲ ಮಾಡಬೇಕೆಂಬುದು ಎಲ್ಲರ ಅಭಿಪ್ರಾಯವಾಗಿದೆ ಹಿಂದೆ ದೇವಸ್ಥಾನಗಳಿಗೆ ಕಂದಾಯದ ಹತ್ತರಷ್ಟನ್ನು ಗೇಣೀರೂಪದಲ್ಲಿ ಕೊಡಲಾಗುತ್ತಿತ್ತು, ಆದರೆ ಈಗ ಅದನ್ನು ಕಂದಾಯದ ೨೫ ರಷ್ಟು ಎಂದು ಮಾಡಿದೆ. ಆದರೆ ಅಲ್ಲಿನ ಸೇವಾಕಾರ್ಯಗಳಿಗೆ ಆ ಹಣ ಸಾಲದೆ ಹೋಗಬಹುದು. ಆದರೆ ಮೊದಲು ಗೇಣೀರೂಪದಲ್ಲಿ ದೇವಾಲಯಗಳಿಗೇನು ಉತ್ಪತ್ತಿ ಬರುತ್ತಿತ್ತು ಈಗ ಅದರ ಎರಡುಪರೆಯಷ್ಟು ಜಾಸ್ತಿ ಬರುತ್ತದೆಂಬುದನ್ನು ಮಾನ್ಯ ಸದಸ್ಯರು ಜ್ಞಾಪಕದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತಿದ್ದೇನೆ.

SRI K. PUTTASWAMY.—I really appreciate the generosity of the Hon'ble Revenue Minister towards these religious institutions. But any way, I wish he should have gone further because we are in the changing conditions. These temples and religious institutions entirely depended upon these lands. Land was very valuable property and even though it did not yield much, there was some sentiment attached to the ownership of the land and therefore these archaks and poojaries though from the point of view of the return that they were getting for the service they were rendering, they were continuing to keep these temples going. As representatives of the people, I think it is responsibility of the Government also to see that these institutions continue to function in the same manner if not better.

MR. DEPUTY SPEAKER. I think the Hon'ble Member may take some more time.

SRI K. PUTTASWAMY I will finish. Therefore I leave this matter to him for his consideration. I should like to ask the Revenue Minister to kindly go through clauses 8 and 9. Each of them runs to about one and a half pages and there is no difference at all. They could have been combined into one clause without much difficulty. There need not have

been these two clauses separately. This is a matter for the draftsmen of the Government to consider and see whether they can do it even at thsi stage. With these remarks I close my speech and thank the Hon. Deputy Speaker for giving me this opportunity to speak at this late stage.

MR. DEPUTY SPEAKER. The Hon. Minister will reply tomorrow. The House will now adjourn to meet at 1 P.M. tomorrow.

The House adjourned at Six of the Clock to meet again at One of the Clock on Thursday, the 1st March 1973.

Annexure — A

THE BANGALORE WATER SUPPLY AND SEWERAGE (AMENDMENT BILL, 1973.)

(L. A. BILL NO. 7 OF 1973)

A Bill further to amend the Bangalore Water Supply and Sewerage Act, 1964.

WHEREAS it is expedient further to amend the Bangalore Water Supply and Sewerage Act, 1964 (Mysore Act 36 of 1964) ;

BE it enacted by the Mysore State Legislature in the Twenty-fourth Year of the Republic of India as follows :—

1. **Short title and commencement**.—(1) This Act may be called the Bangalore Water Supply and Sewerage (Amendment) Act, 1973.

(2) It shall come into force at once.

2. **Substitution of new section for section 4**.—In the Bangalore Water Supply and Sewerage Act, 1964 (Mysore Act, 36 of 1964) (here in after referred to as the prinicipal Act), for section 4, the following section shall be substituted, namely :—

" 4. **Term of office and conditions of service of members**.—(1) Subject to the provision of section 6, the Chairman and other members of the Board shall hold office for a period of three years from the date on which they assume office and shall be eligible for reappointment under such conditions as may be prescribed by rules :

Provided that the State Government may terminate at any time the appointment of the Chairman and other members.

(2) The other conditions of service of the members shall be such as may be prescribed.